# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038








ಸಂಪುಟ:02 Volume:02 • ಸಂಚಿಕೆ: 39 Issue: 39 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 04.08.2024 • ಭಾನುವಾರ Sunday • ಪುಟ:04 Page:04 • ಬೆಲೆ:2 Rs:2



ಮನಸ್ಸು ಮಾಡು
ಕರ್ತವ್ಯ ನಿಷ್ಠನಾಗು
ಕಾದು ನೋಡು

ಪುಟ: 4ರಲ್ಲಿ ನೋಡಿ

ಈ ಬಾರಿ SSLC ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ!
ವಿದ್ಯಾರ್ಥಿಗಳು ಹೆಚ್ಚು ಅಂಕಗಳಿಸಲು ಸುಲಭ ಮಾರ್ಗೋಪಾಯಗಳು
ದಿನಕ್ಕೊಂದು ವಿಷಯ ಹಂಪಿ ಟೈಮ್ಸ್ ಮಾರ್ಗದರ್ಶಿಯಲ್ಲಿ
SSLC ಪರೀಕ್ಷೆ ವಂಚಿತರು, ಆಕಾಂಕ್ಷಿಗಳು ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿನ ದಿನಕ್ಕೊಂದು ವಿಷಯಗಳನ್ನು ಓದಿಕೊಂಡು ಪರೀಕ್ಷೆಗೆ ಸಿದ್ಧಗೊಳ್ಳಲು
ಹಂಪಿ ಟೈಮ್ಸ್ ಮಾರ್ಗದರ್ಶಿ ಸಹಕಾರಿಯಾಗಲಿದೆ... ಇ-ಪೇಪರ್‌ನಲ್ಲೂ ಲಭ್ಯ...
ಹಂಪಿ ಟೈಮ್ಸ್ ಇ-ಪೇಪರ್
94486 33038 | www.hampitimes.com / epaper.hampitimes.com | Vijayanagara | hampitimes@gmail.com



ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
Place your ads here
reach more readers
No. 1 ಜಿಲ್ಲೆಯ ದಿನಪತ್ರಿಕೆ
Why Choose Us?
- Experienced Professionals
- Fast and Reliable Service
- Customized Solutions
- Competitive Pricing

E-mail: hampitimes@gmail.com
www.hampitimes.com
epaper.hampitimes.com
9448633038


## ಮೈಕ್ರೋ ನ್ಯೂಸ್

### ಉಚಿತ ನೇತ್ರ ತಪಾಸಣಾ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರ

**ಹಂಪಿ ಟೈಮ್ಸ್ ಕೊಟ್ಟೂರು**

ಆಗಸ್ಟ್–6 ಮಂಗಳವಾರದಂದು ಐಕೇರ್ ಹಾಸ್ಪಿಟಲ್, ಪತ್ತಿಕೊಂಡ ಕಾಂಪ್ಲೆಕ್ಸ್ ಮತ್ತು ಬಾಲಾಜಿ ಕಲ್ಯಾಣ ಮಂಟಪ ಕೊಟ್ಟೂರಿನಲ್ಲಿ ಉಚಿತ ನೇತ್ರ ತಪಾಸಣಾ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರ ನಡೆಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಜೆ ಸಿ ಐ ಕೊಟ್ಟೂರು ಕಾಟನ್, ಐ ಕೇರ್ ಹಾಸ್ಪಿಟಲ್ ಹೊಸಪೇಟೆ ರೋಟರಿ ಕ್ಲಬ್ ಆರ್ ಪಂಪಾಪತಿ ರೋಟರಿ ಕಣ್ಣಿನ ಆಸ್ಪತ್ರೆ ಹೊಸಪೇಟೆ ಜಿಲ್ಲಾ ಅಂದತ್ವ ನಿಯಂತ್ರಣ ಅಧಿಕಾರಿಗಳು ವಿಜಯನಗರ ಇವರ ಸಂಯುಕ್ತ ಆಶ್ರಯದಲ್ಲಿ ನಡೆಯಲಿದೆ ಎಂದು ತಿಳಿಸಿದೆ. ಉಚಿತ ನೇತ್ರ ಶಸ್ತ್ರ ಚಿಕಿತ್ಸೆ: ಆಗಸ್ಟ್– 10 ಮತ್ತು 11ರಂದು ಐಕೇರ್ ಹಾಸ್ಪಿಟಲ್, ರೋಟರಿಕ್ಲಬ್ ಹೊಸಪೇಟೆಯಲ್ಲಿ ನಡೆಯಲಿದೆ.

ಹೆಚ್ಚಿನ ಮಾಹಿತಿಗಾಗಿ ಅಧ್ಯಕ್ಷರು ನಂದೀಶ್ ತುರಕಾಣಿ ಫೋನ್ ನಂಬರ್ 6 3 6 3 5 7 6366 ಕಾರ್ಯಕ್ರಮದ ನಿರ್ದೇಶಕರು ಕೇಶವ್ ಪ್ರಸಾದ್ ಫೋನ್ ನಂಬರ್ 944 83 39190 ಸಹ ನಿರ್ದೇಶಕರು ಅಟವಾಳಗಿ ಸಂತೋಷ್ 974133444 ಇವರನ್ನು ಸಂಪರ್ಕಿಸಿ.

### ಜಿಲ್ಲಾ ಅನುಷ್ಠಾನ ಸಮಿತಿಯ ನಾಮ ನಿರ್ದೇಶಿತ ಸದಸ್ಯತ್ವಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ, ಅರೆ ಅಲೆಮಾರಿ, ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಸಮುದಾಯಗಳ ಅಭಿವೃದ್ಧಿ ಕೋಶ ಸಮಾಜ ಕಲ್ಯಾಣ ಇಲಾಖೆಯಿಂದ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಗೆ ಒಬ್ಬರು ಪರಿಶಿಷ್ಟ ಜಾತಿಯ ಮಹಿಳಾ ಅಭ್ಯರ್ಥಿ, ಪರಿಶಿಷ್ಟ ವರ್ಗಗೆ ಸೇರಿದ ಒಬ್ಬ ಪುರುಷ ಅಥವಾ ಮಹಿಳಾ ಅಭ್ಯರ್ಥಿ ಹಾಗೂ ಪರಿಶಿಷ್ಟ ಜಾತಿಯ ಇತರೆ 3 ಅಭ್ಯರ್ಥಿಗಳನ್ನು ಎರಡು ವರ್ಷಗಳ ಅವಧಿಗೆ ನಾಮ ನಿರ್ದೇಶನ ಸದಸ್ಯರನ್ನಾಗಿ ನೇಮಕ ಮಾಡಲು ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತಿ ಹೊಂದಿರುವ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಅರ್ಜಿ ಭರ್ತಿ ಮಾಡಿ ಅವಶ್ಯಕ ದಾಖಲಾತಿಗಳನ್ನು ಲಗತ್ತಿಸಿ ಆಗಸ್ಟ್ 20ರೊಳಗಾಗಿ ಜಂಟಿ ನಿರ್ದೇಶಕರ ಕಚೇರಿ ಸಮಾಜ ಕಲ್ಯಾಣ ಇಲಾಖೆ ವಿಜಯನಗರ ಜಿಲ್ಲೆ ಹೊಸಪೇಟೆ ಇವರ ಕಚೇರಿಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ 9900698339ಗೆ ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಂಗೀತ ಸೃಜನಶೀಲತೆ ಹೆಚ್ಚಿಸುತ್ತದೆ

## ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಅಭಿಮತ | ಸಂಗೀತ ವಿಶೇಷ ಉಪನ್ಯಾಸ ಮಾಲೆ

**ಹಂಪಿ ಟೈಮ್ಸ್ ಹೊಸಪೇಟೆ**

ಸಂಗೀತ ಎಲ್ಲರಿಗೂ ಒಲಿಯುವಂತದ್ದಲ್ಲ. ಸಂಗೀತ ಕಲಿಕೆಯಿಂದ ಸೃಜನಶೀಲನೆತೆ ಹೆಚ್ಚುತ್ತದೆ ಮತ್ತು ಹೊಸ ಕಲ್ಪನೆಗಳನ್ನು ಸೃಷ್ಟಿಸಲು ಪ್ರೇರಣೆ ನೀಡುತ್ತದೆ. ಇಂದಿನ ಒತ್ತಡದ ಬದುಕಿಗೆ ಸಿಲುಕಿರುವ ಜನರು ತಮ್ಮ ಒತ್ತಡ ನಿವಾರಣೆಗೆ ಸಂಗೀತಕ್ಕೆ ಮೊರೆ ಹೋಗುತ್ತಿದ್ದಾರೆ ಎಂದು ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ಸಂಗೀತ ಮತ್ತು ನೃತ್ಯ ವಿಭಾಗದಲ್ಲಿ ಗುರುವಾರ ಆಯೋಜಿಸಿದ್ದ 2024–25ನೇ ಶೈಕ್ಷಣಿಕ ಸಾಲಿನ ವಿಶೇಷ ಉಪನ್ಯಾಸ ಮಾಲೆ–1 ನ್ನು ಉದ್ಘಾಟಿಸಿ ಮಾತನಾಡಿದರು. ಜನರಲ್ಲಿ ಜೀವನ ಪ್ರೀತಿ ಬಹಳ ಮುಖ್ಯ. ನಮ್ಮಲ್ಲಿ ಸ್ನೇಹ–ಸಂಬಂಧ ಬೆಸೆಯುವಲ್ಲಿ ಸಂಗೀತ ಪ್ರಮುಖ ಪಾತ್ರವಹಿಸುತ್ತದೆ. ನಿಜವಾದ ಕಲೆಯನ್ನು ಪ್ರೀತಿಸುವವರು ಇತರರಿಗೆ ಒಳಿತನ್ನೇ ಬಯಸುವರು. ಸಂಗೀತ ಕ್ಷೇತ್ರಕ್ಕೆ ಕಾಲಿಡುತ್ತಿರುವ ಯುವ ಪ್ರತಿಭೆಗಳು ತಮ್ಮ ಆತ್ಮತೃಪ್ತಿಯ ಜೊತೆಗೆ ಇತರರಿಗೆ ಸಂತೋಷ ಹಂಚಿ ಸಾಧಕರಾಗಬೇಕು ಎಂದು ಕಿವಿಮಾತು ಹೇಳಿದರು.




ಹುಬ್ಬಳ್ಳಿಯ ನಿವೃತ್ತ ಸಂಗೀತ ಪ್ರಾಧ್ಯಾಪಕ ಡಾ.ಅಶೋಕ ಹುಗ್ಗಣ್ಣವರ ಅವರು ಕನ್ನಡ ರಂಗಭೂಮಿ ಮತ್ತು ಹಿಂದೂಸ್ಥಾನಿ ಸಂಗೀತ ಎಂಬ ವಿಶೇಷ ಉಪನ್ಯಾಸ ಕುರಿತು ಮಾತನಾಡುತ್ತ, ಸಂಗೀತಕ್ಕೆ ಭಾಷೆಯ ಅಗತ್ಯವಿಲ್ಲ. ಅದು ಎಲ್ಲ ಕಡೆಯೂ ತನ್ನ ಛಾಪು ಮೂಡಿಸಿರುವುದು. ಸಂಗೀತದ ಮೂಲ ಜನಪದವೇ ಆಗಿದೆ. ಜನಪದ ಸಂಗೀತವೇ ಇರಲಿ, ಶಾಸ್ತ್ರೀಯ ಸಂಗೀತವೇ ಇರಲಿ ಎರಡಕ್ಕೂ ಅದರದೇ ಆದ ಪೂರ್ವಸಿದ್ಧತೆಗಳು ಬೇಕು. ರಂಗಭೂಮಿ ಮತ್ತು ಸಂಗೀತಕ್ಕೆ ಅವಿನಾಭಾವ ಸಂಬಂಧವಿದೆ ಎಂದು ಅವರು ತಿಳಿಸಿದರು.

ಸಂಗೀತ ಮತ್ತು ನೃತ್ಯ ವಿಭಾಗದ ಮುಖ್ಯಸ್ಥರಾದ ಡಾ. ವೀರೇಶ ಬಡಿಗೇರ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿಭಾಗದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಮಾಂಸ ವ್ಯಾಪಾರಿಗಳಿಗೆ ಎಚ್ಚರಿಕೆ ನಿಯಮ ಮೀರಿದರೆ ಕ್ರಮ

**ಹಂಪಿ ಟೈಮ್ಸ್ ಹೊಸಪೇಟೆ**

ನಗರದಲ್ಲಿ ಬೀದಿನಾಯಿಗಳ ಉಪಟಳ ಹೆಚ್ಚಾಗಿದ್ದು, ವ್ಯಾಘ್ರರೂಪ ತಾಳಿ ಜನರ ಮೇಲೆ ದಾಳಿ ಮಾಡುತ್ತಿವೆ. ನಗರದಲ್ಲಿ ಮಾಂಸ ಮಾರಾಟ ಮಾಡುವ ವ್ಯಾಪರಸ್ಥರು ಪ್ರತಿ ದಿನದ ತಮ್ಮ ಮಾಂಸದ ತ್ಯಾಜ್ಯವನ್ನು ರಸ್ತೆಯಲ್ಲಿ ಎಲ್ಲೆಂದರಲ್ಲಿ ಬಿಸಾಡದೇ ವ್ಯವಸ್ಥಿತವಾಗಿ ಸಂಗ್ರಹಣೆ ಮಾಡಿ ನಗರಸಭೆಯ ಕಸ ವಿಲೇವಾರಿ ವಾಹನಕ್ಕೆ ಕಡ್ಡಾಯವಾಗಿ ನೀಡತಕ್ಕದ್ದು. ತಪ್ಪಿದಲ್ಲಿ ಅಂತಹವರ ವ್ಯಾಪಾರ ವಹಿವಾಟು ಬಂದ್ ಮಾಡಿಸಿ ನಿಯಮಾನುಸಾರ ಕಾನೂನಿನ ಕ್ರಮ ಜರುಗುಸಲಾಗುವುದು ಎಂದು ನಗರಸಭೆ ಪೌರಾಯುಕ್ತರು ಎಚ್ಚರಿಕೆ ನೀಡಿದ್ದಾರೆ.

ಹೊಸಪೇಟೆ ನಗರಸಭೆ ವ್ಯಾಪ್ತಿಗೆ ಒಳಪಡುವ ಎಲ್ಲಾ ನಗರದ ನಾಗರೀಕರಿಗೆ, ತಿಂಡಿ ತಿನಿಸು ಮತ್ತು ಮಾಂಸ ಮಾರಾಟ ಮಾಡುವ ವ್ಯಾಪಾರಸ್ಥರಿಗೆ ಹಾಗೂ ಸಾಕು ನಾಯಿಗಳ ಪಾಲಕರಿಗೆ ಬೀದಿ ನಾಯಿಗಳಿಂದ ಎಚ್ಚರಿಕೆಯಿಂದ ಇರಬೇಕು. ಪ್ರಸ್ತುತ ದಿನಮಾನಗಳಲ್ಲಿ ಬೀದಿ ನಾಯಿಗಳ ಉಪಟಳ ಜಾಸ್ತಿಯಾಗಿದ್ದು, ಅವುಗಳು ತುಂಬಾ ವ್ಯಗ್ರವಾಗಿ ವರ್ತಿಸುತ್ತಿವೆ. ದಾರಿಯಲ್ಲಿ ಹೋಗುವ ಸಾರ್ವಜನಿಕರಿಗೆ, ಮಕ್ಕಳಿಗೆ, ವೃದ್ದರಿಗೆ, ಬೈಕ್ ಹಾಗೂ ಸೈಕಲ್ ಸವಾರರಿಗೆ ಬೆನ್ನತ್ತಿ ಹೋಗಿ ಕಚ್ಚಿ ಗಾಯ ಮಾಡುತ್ತಿರುವ ಹಲವಾರು ಪ್ರಕರಣಗಳ ದೂರುಗಳು ನಗರಸಭೆ ಕಚೇರಿಗೆ ಬರುತ್ತಿವೆ.

ಸಾಕು ನಾಯಿಗಳ ಪಾಲಕರು ತಮ್ಮ ಸಾಕು ನಾಯಿಗಳನ್ನು ರಸ್ತೆಗೆ ಬಿಡದೇ ಅವುಗಳಿಗೆ ಸಕಾಲದಲ್ಲಿ ವ್ಯಾಕ್ಸಿನೇಶನ್ ಮಾಡಿಸಿ ತಮ್ಮ ಮನೆಗಳಲ್ಲಿಯೇ ಕಟ್ಟಿ ಹಾಕಬೇಕು. ಸಾರ್ವಜನಿಕರು ಬೀದಿಗಳಲ್ಲಿ ನಾಯಿಗಳಿಗೆ ಆಹಾರ ನೀಡಿ ಪ್ರೋತ್ಸಾಹ ಮಾಡಬಾರದು. ಅನವಶ್ಯಕವಾಗಿ ಕಟ್ಟಿಗೆ, ಕೋಲು ಮತ್ತು ಕಲ್ಲುಗಳಿಂದ ಹೊಡೆದು ಕೆಣಕದೇ ಇರುವುದು ಉತ್ತಮ. ಬೀದಿನಾಯಿಗಳ ಕಡಿತ ಸಂಭವಿಸಿದ್ದಲ್ಲಿ ತಪಾಸಣೆಗೆ ಕೂಡಲೇ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳನ್ನು ಸಂದರ್ಶಿಸಿ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಬೇಕು. ಅವಶ್ಯವಿದ್ದಲ್ಲಿ ಈ ಬಗ್ಗೆ ನಗರಸಭೆಗೆ ಮಾಹಿತಿ ನೀಡಬಹುದು ಎಂದು ನಗರಸಭೆ ಪೌರಾಯುಕ್ತರು ಸಾರ್ವಜನಿಕರಿಗೆ ತಿಳಿಸಿದ್ದಾರೆ.

# ಎರಡು ವರ್ಷದಿಂದ ಎಸ್ಸಿ, ಎಸ್ಟಿ ವಿದ್ಯಾರ್ಥಿ ವೇತನ ಕಡಿತ : ಐಸಾ ಸಂಘಟನೆ ಪ್ರತಿಭಟನೆ




**ಹಂಪಿ ಟೈಮ್ಸ್ ಕೊಟ್ಟೂರು**

ರಾಜ್ಯ ಸರ್ಕಾರದ ವೈಫಲ್ಯ ಹಾಗೂ ಅಧಿಕಾರಿಗಳ ನಿರ್ಲಕ್ಷ ದಿಂದ ಎಸ್ಸಿ, ಎಸ್ಟಿ ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ಹಾಗೂ ಪ್ರೋತ್ಸಾಹ ಧನವನ್ನು 2 ವರ್ಷಗಳಿಂದ ಕಡಿತಗೊಳ್ಳಿಸಿರುವುದನ್ನು ವಿರೋಧಿಸಿ ಶನಿವಾರ ಪಟ್ಟಣದ ಬಸ್ ನಿಲ್ದಾಣದ ಬಳಿ ಅಖಿಲ ಭಾರತ ವಿದ್ಯಾರ್ಥಿ ಸಂಘಟನೆಯಿಂದ ಪ್ರತಿಭಟನೆ ಕೈಗೊಳ್ಳಲಾಯಿತು.

ಈ ವೇಳೆ ಐಸಾ ರಾಜ್ಯ ಸಂಚಾಲಕ ಸಮಿತಿ ಸದಸ್ಯೆ ಲೇಖ ಮಾತನಾಡಿ ಬಡ ಹಾಗೂ ದಲಿತ ವಿದ್ಯಾರ್ಥಿಗಳು ಉನ್ನತ ವಿದ್ಯಾಭ್ಯಾಸಕ್ಕೆಂದೆ ವಿದ್ಯಾರ್ಥಿ ವೇತನ, ಪ್ರೋತ್ಸಾಹ ಧನವನ್ನು ಸರ್ಕಾರ ನೀಡಿದೆ ಇದ್ದನೇ ಕಡಿತಗೊಳಿಸಿದರೆ ವಿದ್ಯಾಭ್ಯಾಸ ಮೊಟಕುಗೊಳ್ಳುವುದು ನಿಶ್ಚಿತ ಈ ಹಿನ್ನೆಲೆ ಉನ್ನತ ಶಿಕ್ಷಣಕ್ಕೆ ಸರ್ಕಾರದ ಸೌಲಭ್ಯಗಳು ಅತ್ಯವಶ್ಯಕ ಎಂದು ಹೇಳಿದರು.

ಐಸಾ ರಾಜ್ಯ ಸಂಘಟನಾ ಸಂಚಾಲಕ ಸಂತೋಷ್ ಗುಳೇದಟ್ಟಿ ಮಾತನಾಡಿ ವಿದ್ಯಾರ್ಥಿಗಳೇ ತಮ್ಮಗೆ ತಾವೇ ದಾರಿ ದೀಪ, ತಮ್ಮ ಸೌಲಭ್ಯಕ್ಕಾಗಿ, ಶಿಕ್ಷಣದ ಜೊತೆ ಜೊತೆಗೆ ಹೋರಾಟ ಅನಿವಾರ್ಯವಾಗಿದೆ ,ಇದಕ್ಕೆ ಐಸಾ ಸಂಘಟನೆ ಬೆಂಬಲಿಸಿದೆ ಎಂದರು. ಸಿಪಿಐ (ಎಂಎಲ್ ) ತಾಲೂಕು ಕಾರ್ಯದರ್ಶಿ ಮಲ್ಲಿಕಾರ್ಜುನ್ ಮಾತನಾಡಿದರು.

ಸಮಾಜ ಕಲ್ಯಾಣ ಇಲಾಖೆ ಕಚೇರಿ ಅಧೀಕ್ಷಕರಾದ ಎಸ್ ಪಕ್ಕೀರಪ್ಪ, ಹಾಗೂ ಎಸ್ ಟಿ ತಾಲೂಕು ಅಧಿಕಾರಿಯವರಿಗೆ ಮನವಿ ಪತ್ರ ನೀಡಿ ಶೀಘ್ರ ಶಿಷ್ಯ ವೇತನ ಹಾಗೂ ಪ್ರೋತ್ಸಾಹ ಧನ ನೀಡಬೇಕೆಂದು ಸರ್ಕಾರಕ್ಕೆ ಆಗ್ರಹಿಸಿದರು.

ಕೆ. ಬಾಲಣ್ಣ, ಜೆ.ಅಜ್ಜಪ್ಪ, ರಾಜ್ಯ ಸಂಚಾಲಕ ಸಮಿತಿ ಸದಸ್ಯರು ದೊಡ್ಡ ಬಸಪ್ಪ ವಿದ್ಯಾರ್ಥಿ ಸಂಘದ ಜಿಲ್ಲಾ ಸಮಿತಿ ಸದಸ್ಯ, ಗಡ್ಡಿ ಶರಬಣ್ಣ, ಅಜ್ಜಪ್ಪ ತಾಲೂಕು ಸಮಿತಿ ಸದಸ್ಯರು, ಬಾಲ ಗಂಗಾಧರ್ ಹರಪನಹಳ್ಳಿ ತಾಲೂಕು ಕಾರ್ಯದರ್ಶಿ, ಮತ್ತು ತಿಪ್ಪೇರುದ್ರಸ್ವಾಮಿ ಕಾಲೇಜ್ ವಿದ್ಯಾರ್ಥಿಗಳು ಮತ್ತು ಪಿಯು ಕಾಲೇಜ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಇಂದು ಉಚಿತ ನೇತ್ರಾ ತಪಾಸಣ, ಶಸ್ತ್ರ ಚಿಕಿತ್ಸಾ ಶಿಬಿರ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**



ಪಟ್ಟಣದ ಬಿ.ಸಿ.ಆರ್. ಪೌಂಡೇಷನ್, ಲಿಂಗಾಯತ ಸಮಾಜಮುಖಿ ಟ್ರಸ್ಟ್ ಹಾಗೂ ಶಿವಮೊಗ್ಗದ ಶಂಕರ್ ಕಣ್ಣಿನ ಆಸ್ಪತ್ರೆ ಮತ್ತು ಸಾರ್ವಜನಿಕ ಆಸ್ಪತ್ರೆ ಮತ್ತು ಆರೋಗ್ಯ ಸಂಬಂಧಿತ ಸಂಘಟನೆಗಳೊಂದಿಗೆ ಇಂದು ಆ.04ರ ಭಾನುವಾರ ಉಚಿತ ನೇತ್ರಾ ತಪಾಸಣ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಫೌಂಡೇಷನ್‌ನ ಮುಖಂಡ ಭದ್ರವಾಡಿ ಚಂದ್ರಶೇಖರ್ ತಿಳಿಸಿದರು.

ಇಲ್ಲಿಯ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯಲ್ಲಿ ಶಿಬಿರವನ್ನು ಹಮ್ಮಿಕೊಳ್ಳಲಾಗಿದ್ದು, ಬೆಳಗ್ಗೆ 9ಗಂಟೆಯಿಂದ ಮಧ್ಯಾಹ್ನ 1ಗಂಟೆಯವರೆಗೂ ತಪಾಸಣೆ ಜರುಗಲಿದೆ. ತಪಾಸಣೆಗೆ ಬರುವವರು 2ಪಾಸ್ ಪೋಟೋಗಳನ್ನು, ಪಡಿತರ ಕಾರ್ಡ್, ಆಧಾರ್ ಕಾರ್ಡ್, ಮತದಾನ ಗುರುತಿನ ಕಾರ್ಡ್‌ಗಳ ತಲಾ 2 ಜೆರಾಕ್ಸ್ ಪ್ರತಿಗಳನ್ನು ಕಡ್ಡಾತವಾಗಿ ತರಬೇಕು. ಕುಟುಂಬದ ಒಬ್ಬರು ಸಹಾಯಕರನ್ನಾಗಿ ಕರೆದುಕೊಂಡು ಬರಬೇಕು ಎಂದು ತಿಳಿಸಿದರು. ಹೆಚ್ಚಿನ ಮಾಹಿತಿಗಾಗಿ, 9880136063, 9741660168, 9972804549, 9743933711 ಸಂಪರ್ಕಿಸಿ.

# ಗುರಿ ಸಾಧನೆಗೆ ಗುರುವಿನ ಮಾರ್ಗದರ್ಶನ ಅಗತ್ಯ

## ಸಹಾಯಕ ಕುಲಸಚಿವ ಎಂಎಂ ಶಿವಪ್ರಕಾಶ್ ಹೇಳಿಕೆ | ಎನ್‌ಎಸ್‌ಎಸ್.ಸ್ಕೌಟ್ ಅಂಡ್ ಗೈಡ್ಸ್. ವಿವಿಧ ಸಾಂಸ್ಕೃತಿಕ ಚಟುವಟಿಕೆಗಳ ಕಾರ್ಯಕ್ರಮ

**ಹಂಪಿ ಟೈಮ್ಸ್ ಕೊಟ್ಟೂರು**

ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಉಪನ್ಯಾಸಕರ ಪಾತ್ರ ಅಪಾರ, ಪ್ರತಿಯೊಬ್ಬ ವ್ಯಕ್ತಿಯ ಹಿಂದೆ ಉತ್ತಮ ಗುರುಗಳಿದ್ದರೆ ಜೀವನದಲ್ಲಿ ಯಶಸ್ಸು, ಅತ್ಯಂತ ಸುಲಭ ಎಂದು ಸಾಹಿತಿಗಳು ಹಾಗೂ ಹಂಪಿ ವಿಶ್ವವಿದ್ಯಾಲಯದ ಸಹಾಯಕ ಕುಲ ಸಚಿವ ಎಂಎಂ ಶಿವಪ್ರಕಾಶ್ ಹೇಳಿದರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜ್ ನಲ್ಲಿ ಶುಕ್ರವಾರ ಆಯೋಜಿಸಿದ್ದ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮ ಹಾಗೂ ಎನ್‌ಎಸ್‌ಎಸ್. ಸ್ಕೌಟ್ ಅಂಡ್ ಗೈಡ್ಸ್. ವಿವಿಧ ಸಾಂಸ್ಕೃತಿಕ ಚಟುವಟಿಕೆಗಳ ಕಾರ್ಯಕ್ರಮವನ್ನು ಉದ್ಘಾಟಿಸಿ ಉಪನ್ಯಾಸ ನೀಡಿದರು.

ಗ್ರಾಮೀಣ ಮಕ್ಕಳು ಯಾವ ವಿಷಯಗಳಲ್ಲೂ ಕಡಿಮೆ ಇಲ್ಲ, ನಿಮ್ಮೊಳಗಿನ ಗ್ರಾಮೀಣರೆಂಬ ಕೀಳರುಮೆ ತೆಗೆದುಹಾಕಿ. ವಿದ್ಯೆ ಯಾರ ಸೊತ್ತು ಅಲ್ಲ ಪ್ರತಿಯೊಬ್ಬ ವಿದ್ಯಾರ್ಥಿಯು ಜವಾಬ್ದಾರಿ ಅರಿತು, ನಿಷ್ಠೆಯಿಂದ ಓದಿದ್ದೇ ಆದರೆ ಸಾಧನೆ ನಿಮ್ಮದಾಗುತ್ತೆ ಎಂದರು.



ಕಾಲೇಜಿನ ಪ್ರಾಚಾರ್ಯರು ಡಾ. ಜಿ ಸೋಮಶೇಖರ್ ಮಾತನಾಡಿ, ಖಾಸಗಿ ಕಾಲೇಜ್‌ಗಳಿಗಿಂತ, ವಿದ್ಯಾರ್ಥಿಗಳ ಉತ್ತಮ ಕಲಿಕೆಗೆ ಪೂರಕ ವಾತಾವರಣ ಇಲ್ಲಿದೆ, ಕಳೆದ ಫಲಿತಾಂಶದಲ್ಲಿ 8 ಮತ್ತು 10 ನೇ ರ್‍ಯಾಂಕ್ ಪಡೆದು ವಿದ್ಯಾರ್ಥಿನಿಯರು ಕಾಲೇಜ್ ನ ಕೀರ್ತಿ ಹೆಚ್ಚಿಸಿದ್ದಾರೆ, ತಾವು ಕೂಡಾ ಕಲಿಕೆಗೆ ಹೆಚ್ಚು ಒತ್ತು ಕೊಟ್ಟು, ಉತ್ತಮ ಫಲಿತಾಂಶ ಗಳಿಸಿ ಎಂದು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಸ್ಕೌಟ್ ನ ಜಿಲ್ಲಾ ಕಾರ್ಯದರ್ಶಿ ಮಂಜುನಾಥ್ ವಿದ್ಯಾರ್ಥಿಗಳಿಗೆ ಸ್ಕೌಟ್ ಅಂಡ್ ಗೈಡ್ಸ್ ವಿದ್ಯಾರ್ಥಿಗಳಿಗೆ ಜೀವನದಲ್ಲಿ ಶಿಸ್ತು, ದೇಶಪ್ರೇಮ ಮೂಡಿಸುವಲ್ಲಿ ಹಾಗೂ ಉತ್ತಮ ವ್ಯಕ್ತಿತ್ವ ಕಾಯ್ದುಕೊಳ್ಳಲು ನೆರವಾಗುತ್ತದೆ ಎಂದರು.

2023–24ನೇ ಸಾಲಿನಲ್ಲಿ ದ್ವಿತೀಯ ಪಿಯುಸಿಯಲ್ಲಿ 8 ಮತ್ತು 10 ನೇ ರ್‍ಯಾಂಕ್ ಪಡೆದ ಆಸರಗೋಡ ಹಾಲಮ್ಮ ಹಾಗೂ ಜೆ.ಶಾಲಿನಿ ವಿದ್ಯಾರ್ಥಿನಿಯರಿಗೆ ಪ್ರೋತ್ಸಾಹ ಧನ ನೀಡಿ ಗೌರವಿಸಿದರು.

ಕಾಲೇಜ್ ಅಭಿವೃದ್ಧಿ ಸಮಿತಿ ಸದಸ್ಯರು ಡಿಶ್ ಮಂಜಣ್ಣ, ಎಂ.ನಾಗರಾಜ್, ಪಾರ್ವತಿ ಕೊಟ್ರೇಶ್ ಹಾಗೂ ನಿವೃತ್ತ ಉಪನ್ಯಾಸಕರು ಸರ್ಪಭೂಷಣ್ ಕೂಡ್ಲಿಗಿ ಕನ್ನಡ ಉಪನ್ಯಾಸಕರು ಹೆಗ್ಗಪ್ಪ, ಉಪನ್ಯಾಸಕರಾದ ಕೆ ಎಮ್ ರೇಣುಕ ಸ್ವಾಮಿ, ಜಯಣ್ಣ, ವಿಜಯಲಕ್ಷ್ಮಿ, ನಾಗರಾಜ್ ಮಗ್ಗದ್, ಅರವಿಂದ್ ಹಿರೇಮಠ್, ಕುಮಾರಿ ಪ್ರಜ್ಞ, ವೀಣಾ, ಮಂಜುಳಾ ಹಾಜರಿದ್ದರು. ಉಪನ್ಯಾಸಕರಾದ ಸಿದ್ದೇಶ್ ಪ್ರಾಸ್ತಾವಿಕ ನುಡಿಗಳನ್ನಾಡಿದರು, ಜಗದೀಶ್ ಚಂದ್ರ ಬೋಸ್ ಸ್ವಾಗತಿಸಿದರು, ಅಂಜಿನಪ್ಪ ಕಾರ್ಯಕ್ರಮ ನಿರೂಪಿಸಿದರು.ಎಂ. ಸಿದ್ದಲಿಂಗನಗೌಡ ವಂದಿಸಿದರು.

ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

# ಪಕ್ಷಗಳಿಗೆ ಚಿನ್ನಾಟ ಜನರಿಗೆ ಸಂಕಟ

ಕರ್ನಾಟಕದ ಜನರ ಹಣೆಬರಹವೇ ಸರಿಯಾಗಿಲ್ಲ ಅಂತ ಅನಿಸುತ್ತೆ. ಒಂದೆಡೆ ರಾಜ್ಯದಲ್ಲಿ ಅತೀವ ಮಳೆಯಾಗಿ, ಅದರಿಂದ ಪ್ರವಾಹ ಸೃಷ್ಟಿಯಾಗಿ ಅನೇಕ ಅವಾಂತರಗಳು ಸೃಷ್ಟಿಯಾಗಿವೆ. ಎಷ್ಟೂ ಜನರು ಇದರಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ. ಮತ್ತೊಂದೆಡೆ ಮಳೆ ಸರಿಯಾಗಿ ಸುರಿಯದ ಕಾರಣ ಮಳೆಯಾಶ್ರಿತ ಭೂಮಿ ಪಾಳು ಬಿದ್ದಂತಾಗಿದೆ. ಈ ಮೂಲಕ ಕಳೆದ ವರ್ಷ ಬರದ ಛಾಯೆ ಎಲ್ಲಿ ಮರುಕಳಿಸುತ್ತೋ ಎಂಬ ಆತಂಕವೂ ಶುರುವಾಗಿದೆ. ಈ ಎಲ್ಲ ಪ್ರಮುಖ ಮತ್ತು ಗಂಭೀರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕಾದ ಸರ್ಕಾರ ಮತ್ತು ವಿಪಕ್ಷಗಳು ರಾಜ್ಯದ ಜನರೊಂದಿಗೆ ಚೆಲ್ಲಾಟವಾಡುತ್ತಿವೆ. ಒಬ್ಬರಿಗೊಬ್ಬರು ಪರಸ್ಪರ ಕೆಸರು ಎರಚಿಕೊಂಡು ಕಾಲಹರಣ ಮಾಡುತ್ತಿವೆಯೇ ಹೊರತು ಜನಸಾಮಾನ್ಯರ ಕಷ್ಟಕ್ಕೆ ಸ್ಪಂದಿಸುತ್ತಿಲ್ಲ. ವಾಲ್ಮೀಕಿ ಅಭಿವೃದ್ಧಿ ನಿಗಮ ಮತ್ತು ಮುಡಾ ಹಗರಣದಲ್ಲೇ ಆಡಳಿತ ಕಾಂಗ್ರೆಸ್ ಸರ್ಕಾರ ಮತ್ತು ವಿರೋಧ ಪಕ್ಷವಾದ ಬಿಜೆಪಿ ಆರೋಪ ಮತ್ತು ಪ್ರತ್ಯಾರೋಪಗಳ ಮಾಡುತ್ತಲೇ ದಿನ ದೂಡುತ್ತಿವೆ. ಆದರೆ, ನೆರೆ ಮತ್ತು ಪ್ರವಾಹ ಪೀಡತ ರೈತರು ಮತ್ತು ಜನರ ಬಳಿ ಹೋಗುತ್ತಿಲ್ಲ. ಪ್ರಜ್ಞಾವಂತರಿಗೆ ಸರ್ಕಾರ ಮತ್ತು ವಿಪಕ್ಷಗಳ ಆರೋಪ–ಪ್ರತ್ಯಾರೋಪಗಳು ನಾಟಕೀಯ ಎಂಬಂತೆ ಕಾಣುತ್ತಿವೆ. ಈ ನಾಟಕೀಯ ಬೆಳವಣಿಗೆಯಲ್ಲಿ ಕಾಮನ್ ಮ್ಯಾನ್ ಮಾತ್ರ ಬಸವಳಿದಿದ್ದಾನೆ. ಒಂದೆಡೆ ಮಳೆಯೇ ಸುರಿಯದೆ ರೈತರ ಮುಗಿಲು ನೋಡುತ್ತಿದ್ದಾನೆ. ಆದರೆ, ಬರೀ ಮೋಡಗಳು ಕಾಣಸಿಗುತ್ತಿದೆಯೇ ಹೊರತು ಅದರಿಂದ ಮಳೆ ಸುರಿಯುತ್ತಿಲ್ಲ. ಬಿತ್ತನೆಗೆ ಸಕಲ ಸಿದ್ಧತೆ ಮಾಡಿಕೊಂಡಿದ್ದ ರೈತರಿಗೆ ಮುಂದೇನು ಮಾಡಬೇಕೆಂದು ಒದ್ದಾಡುತ್ತಾ ಇದ್ದಾರೆ. ಮತ್ತೊಂದೆಡೆ ತಲೆ ಮುಗಿಲು ನೋಡಲು ಅವಕಾಶ ಸಿಗದಷ್ಟು ಮಳೆ ಸುರಿಯುತ್ತಿದೆ. ಬಿತ್ತನೆ ಮಾಡಿದ್ದ ಬೀಜಗಳೆಲ್ಲವೂ ನೀರುಪಾಲಾಗಿದೆ. ಅದೂ ಹೋಗಲಿ. ಜಮೀನುಗಳೆಲ್ಲವೂ ನೀರುಪಾಲಾಗಿದ್ದು, ತನ್ನ ಜಮೀನು ಎಲ್ಲಿದೆ ಎಂದು ಹುಡುಕುವ ದುಸ್ಥಿತಿ ಎದುರಾಗಿದೆ. ಮಲೆನಾಡಿನಲ್ಲಿ ಭೂ ಕುಸಿತ ಉಂಟಾಗಿ



ಜನಸಾಮಾನ್ಯರು ತಮ್ಮ ಮನೆಗಳೆಲ್ಲಿ ಅಂತ ಹುಡುಕುತ್ತಿದ್ದಾರೆ. ಅನೇಕ ಜನ ಸಾವಿಗೀಡಾಗಿದ್ದಾರೆ. ಇತ್ತ ತುಂಗಭದ್ರಾ ಜಲಾಶಯದಿಂದ ಉಂಟಾದ ಪ್ರವಾಹ ಪರಿಣಾಮ ಗದ್ದೆಗಳೆಲ್ಲ ಜಲಾವೃತವಾಗಿದೆ. ಬಾಗಲಕೋಟೆ ಮತ್ತು ರಾಯಚೂರು ಜಿಲ್ಲೆಯಲ್ಲಿ ಕೃಷ್ಣೆಯ ಅಬ್ಬರದ ಪರಿಣಾಮ ನೀರಾವರಿ ಭೂಮಿ ಹಾಳಾಗಿದೆ. ಇದರಿಂದ ರೈತರು ತಲೆಮೇಲೆ ಕೈಕಟ್ಟಿಕೊಂಡು ಕುಳಿತಿದ್ದಾರೆ. ನಮ್ಮ ಅವಳಿ ಜಿಲ್ಲೆಯನ್ನೇ ತೆಗೆದುಕೊಳ್ಳಿ ಹೊಸಪೇಟೆ ಹೊರತುಪಡಿಸಿ ಜಿಲ್ಲೆಯ ಕೂಡ್ಲಿಗಿ, ಕೊಟ್ಟೂರು, ಬಳ್ಳಾರಿ ಜಿಲ್ಲೆಯ ಸಂಡೂರು, ಬಳ್ಳಾರಿ ಗ್ರಾಮೀಣದಲ್ಲಿ ಮಳೆಯೇ ಆಗಿಲ್ಲ. ಅವರಿನ್ನೂ ಮುಂಗಾರು ಈಗ ಸುರಿಯುತ್ತೆ.. ಆಗ ಸುರಿಯುತ್ತೆ ಎಂಬ ನಂಬಿಕೆಯಿಂದಲೇ ಜೀವನ ಸಾಗಿಸುತ್ತಿದ್ದಾರೆ. ಆದರೆ, ಇದಾವುದರ ಪರಿವೇ ಇಲ್ಲದಂತೆ ಸರ್ಕಾರ ಮತ್ತು ವಿಪಕ್ಷಗಳು ವರ್ತಿಸುತ್ತಿರುವುದು ನಾಚಿಗೇಡು ಎಂಬಂತಿದೆ. ಎರಡೂ ಪಕ್ಷಗಳ ನಾಯಕರಿಗೆ ಜನರ ಕುರಿತಾಗಿ ನಿಜವಾಗಿಯೂ ಕಾಳಜಿ ಇದ್ದರೆ ಅವರ ಸಮಸ್ಯೆಗಳನ್ನು ಬಗೆಹರಿಸಲು ಮುಂದಾಗಲಿ. ಅದರಲ್ಲೂ ಪ್ರಚಾರ ಗಿಟ್ಟಿಸಿಕೊಳ್ಳುವುದು ಬೇಡ. ಸರ್ಕಾರ ತನ್ನ ಶಕ್ತಿಮೀರಿ ರೈತರಿಗೆ ಮತ್ತು ಜನರ ಸಂಕಷ್ಟಗಳಿಗೆ ನೆರವಾಗಲಿ. ವಿಪಕ್ಷಗಳೂ ಸಹ ಸರ್ಕಾರದ ಮೇಲೆ ಒತ್ತಡ ಹೇರಿ ಜನರ ಬದುಕು ಹಸನಾಗಲು ಏನು ಬೇಕೋ ಅದನ್ನು ಮಾಡಲಿ. ಹಾಗಾದಲ್ಲಿ ಮಾತ್ರ ನಿಮ್ಮನ್ನು ಚುನಾಯಿಸಿದವರ ಋಣ ತೀರಿಸಿದಂತಾಗುತ್ತದೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಶ್ರೀ ಕೃಷ್ಣದೇವರಾಯನ ಅಮುಕ್ತ ಮಾಲ್ಯದ

ರಾಜ ನೀತಿಯನ್ನು ವಿವರಿಸಿರುವ ಈ ಗ್ರಂಥ ರಾಜ ನೀತಿಯು ಮಧ್ಯೆಯುಗೀನ ರೀತಿ ನೀತಿಗಳಿಗೆ ಹೊಂದಿಕೊಂಡಿದ್ದರು ಇವತ್ತಿನ ರಾಜಕೀಯ ಪರಿಸ್ಥಿತಿಗೆ ಇದು ಅನ್ವಯಿಸುತ್ತದೆ ಅನ್ನುವುದನ್ನು ಗಮನಿಸಬಹುದಾಗಿದೆ. ಒಟ್ಟಾರೆ ಈ ಆಮುಕ್ತ ಮಾಲ್ಯದ ಗ್ರಂಥವು ಒಂದು ವಿಶಿಷ್ಟ ಗ್ರಂಥವಾಗಿದ್ದು ಕೃಷ್ಣದೇವರಾಯನ ರಾಜನೀತಿಯನ್ನು ಈ ಕೃತಿ ಹೇಳುತ್ತದೆ



ಎಂ.ಎಂ.ಶಿವಪ್ರಕಾಶ
ಲೇಖಕರು: ಹೊಸಪೇಟೆ
ಮೊ: 9449654489

Scan For Digital Colourful
HAMPI TIMES E-paper

ವಿಜಯನಗರ ಸಾಮ್ರಾಜ್ಯದ ಅರಸರುಗಳು ಪ್ರಮುಖವಾಗಿ ಒಂದನೇ ಹರಿಯರ, ಪ್ರೌಢದೇವರಾಯ, ಶ್ರೀಕೃಷ್ಣದೇವರಾಯ, ಅಚ್ಯುತದೇವರಾಯ ಇವರುಗಳ ಕಾಲದಲ್ಲಿ ಕವಿಗಳಿಗೆ ಪಂಡಿತರಿಗೆ ರಾಜಾಸ್ಥಾನವನ್ನು ಕಲ್ಪಿಸಲಾಗಿತ್ತು. ಇವರ ಕಾಲಘಟ್ಟದಲ್ಲಿ ಅನೇಕ ಕೃತಿಗಳು ರಚನೆಗೊಂಡಿವೆ. ಶ್ರೀ ಕೃಷ್ಣದೇವರಾಯ ತೆಲುಗಿನಲ್ಲಿ ಅಮುಕ್ತಮಾಲ್ಯದ ಎಂಬ ಗ್ರಂಥವನ್ನು ಸಹ ರಚಿಸಿದ್ದಾರೆ. ಇದು ಒಂದು ವಿಶಿಷ್ಟ ಕೃತಿಯಾಗಿದ್ದು ಶ್ರೀ ಕೃಷ್ಣದೇವರಾಯನ ರಾಜನೀತಿಯನ್ನು ಕುರಿತ ಈ ಕೃತಿ ರಚನೆಗೊಂಡಿದೆ ಎಂಬುದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.ಈ ಗ್ರಂಥ ಕುರಿತ ಒಂದಿಷ್ಟು ಮಾಹಿತಿ.

ವಿಜಯನಗರ ಸಾಮ್ರಾಜ್ಯವನ್ನು ಆಳಿದ ಪ್ರತಿಷ್ಠಿತ ಅರಸರುಗಳಲ್ಲಿ ಶ್ರೀ ಕೃಷ್ಣದೇವರಾಯನು ಪ್ರಮುಖ. ಇವರ ಆಡಳಿತದ ಕಾಲಘಟ್ಟದಲ್ಲಿ ಅನೇಕ ಕಾರ್ಯಗಳು ನಡೆದವು ಹಾಗೇನೇ ತಮ್ಮ ಆಸ್ಥಾನದಲ್ಲಿ ಕವಿಗಳಿಗೆ ಪಂಡಿತರಿಗೆ ರಾಜಾಶ್ರಯವನ್ನು ನೀಡಿ ಅವರ ಸಾಹಿತ್ಯ ಕಾರ್ಯಗಳಿಗೆ ಪ್ರೋತ್ಸಾಹವನ್ನು ನೀಡಿದ್ದನು. ಈತನ ಆಸ್ಥಾನದಲ್ಲಿ ಕನ್ನಡ ತೆಲುಗು ತಮಿಳು ಸಂಸ್ಕೃತ ಕವಿಗಳು ಸಹ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ ವಿಶೇಷವಾಗಿ ಕೃಷ್ಣದೇವರಾಯನ ಆಸ್ಥಾನದ ಅಷ್ಟ ದಿಗ್ಗಜರು ಎಂದು ಹೆಸರಾಗಿರುವ ಅಲ್ಲಾ ಸಾನಿ ಪೆದ್ದನ, ನಂದಿ ತಿಮ್ಮಣ್ಣ, ಧೂರ್ಜಟ, ಆಯ್ಯಲರಾಜ ರಾಮಭದ್ರ ಕವಿ, ಮಲ್ಲನ ,ತೆನಾಲಿ ರಾಮಕೃಷ್ಣ ಕವಿ ,ಪಿಂಗಳ ಸೂರಿನ, ರಾಮರಾಜ ಭೂಷಣ ಹೀಗೆ ಅಷ್ಟ ದಿಗ್ಗಜರು ಇವರ ಆಸ್ಥಾನದಲ್ಲಿದ್ದರು.ಈ ಅಷ್ಟದಿಗ್ಗಜ ಕವಿಗಳಿಗಾಗಿ ಕಡಪ ಮಂಡಲದ ತಿಪ್ಪಲೂರು ಎಂಬ ಗ್ರಾಮವನ್ನು ಸರ್ವಾ ಗ್ರಹಾರವಾಗಿ ದಾನ ಮಾಡಿದ್ದರು ಎಂಬುದು ಶಾಸನಗಳಿಂದ ತಿಳಿದು ಬರುತ್ತದೆ.

ಅಷ್ಟ ದಿಗ್ಗಜರ ಜೊತೆಗೆ ಕರ್ನಾಟಕ ಕವಿ ಕುಲ ಸಾರ್ವಭೌಮ ಬಾಲಕವಿ ಕುಮಾರನಾದ ಮಹಾಕವಿ ತಿಮ್ಮಣ್ಣ ಕುಮಾರವ್ಯಾಸನ ಸಂಪೂರ್ಣ ಭಾರತವನ್ನು ಶಾಂತಿ ಪರ್ವದಿಂದ ಪ್ರಾರಂಭಿಸಿ ಪೂರ್ತಿಗೊಳಿಸಿದ ಎನ್ನಲಾಗಿದೆ .ಶ್ರೀ ವ್ಯಾಸ ತೀರ್ಥರು ದಾಸ ಪರಂಪರೆಯ ದಾಸ ಶ್ರೇಷ್ಠರಾಗಿದ್ದವರು. ಹಾಗೇನೆ ಪುರಂದಾಸರು, ಕನಕದಾಸರು ಮೊದಲಾದವರು ದಾಸ ಸಾಹಿತ್ಯವನ್ನು ಈ ಕಾಲಘಟ್ಟದಲ್ಲಿ ಬೆಳೆಸಿದವರು. ಇವರೆಲ್ಲರ ಮಧ್ಯೆ ಕೃಷ್ಣದೇವರಾಯ ಸಹ ಸಾಹಿತ್ಯ ಕೃತಿಯಾದ ಅಮಾಕ್ತಮಾಲ್ಯದ ಗ್ರಂಥ ರಚನೆ ಮಾಡಿ ಎಲ್ಲರ ಗಮನವನ್ನು ಸೆಳೆದಿದ್ದವನು.


ಅಮುಕ್ತ ಮಾಲ್ಯದ ಕೃತಿಯ ರಚನೆ ಹಿಂದೆ ಒಂದು ಚರಿತ್ರೆ ಇದೆ ಅದೇನೆಂದರೆ ಏಕಾದಶಿಯ ರಾತ್ರಿ ಕೃಷ್ಣದೇವರಾಯನ ಕನಸಿನಲ್ಲಿ ಕಂಡ ಆಂದ್ರ ವಿಷ್ಣು ತನಗೊಂದು ಕಾವ್ಯವನ್ನು ತೆಲುಗು ಭಾಷೆಯಲ್ಲಿ ಬರೆದು ಕೊಡುವಂತೆ ಕೇಳಿದನಂತೆ ಆ ಪ್ರಕಾರವಾಗಿ ಈ ಗ್ರಂಥ ರಚನೆಗೊಂಡಿದೆ .ಅಮಾಸ್ತ ಎಂದರೆ ಅಲಂಕರಿಸಿಕೊಂಡ. ಮಾಲ್ಯ ಎಂದರೆ ಹೂಮಾಲೆಯನ್ನು ದ ಎಂದರೆ ಕೊಟ್ಟವಳು ಮುಕ್ತ ಎಂದರೆ ಬಿಡಲ್ಪಟ್ಟ ಆ ಸೇರಿಸಿಕೊಂಡಾಗ ಅಲಂಕರಿಸಿಕೊಂಡ ಎಂದು ಅರ್ಥವಾಗುತ್ತದೆ .ಇದರ ಒಟ್ಟು ಅರ್ಥ ತಾನು ಅಲಂಕರಿಸಿಕೊಂಡ ಹೂಮಾಲೆಯನ್ನು ಕೊಟ್ಟವಳು ಎಂದಾಗುತ್ತದೆ. ಎಂದು ವಿದ್ವಾಂಸರು ವಿಶ್ಲೇಷಿಸಿದ್ದಾರೆ ತಮಿಳು ದೇಶದ ಸ್ರೀ ವಿಲ್ಲಿ ಪುತ್ತೂರಿನಲ್ಲಿ ಕ್ರಿಸ್ತಶಕ 725 ರಲ್ಲಿ ನಡೆದ ಕಥೆಯ ಆಧಾರವಾಗಿ ಈ ಗ್ರಂಥ ಅಥವಾ ಕಾವ್ಯ ರಚನೆಗೊಂಡಿದೆ ಎನ್ನಲಾಗಿದೆ.

ಈ ಗ್ರಂಥವು ಸುಮಾರು 28 ಅಧ್ಯಾಯಗಳನ್ನು ಒಳಗೊಂಡಿದೆ ಅವುಗಳಲ್ಲಿ ಪ್ರಮುಖವಾಗಿ ಅಮಾಕ್ತಮಾಲ್ಯದ, ವಿಷ್ಣು ಚಿತ್ತನು, ಮಧುರಾಪುರ, ಪುಷ್ಪಲಾವಿಕೆಯರು, ವೇಶ್ಯೆಯರು, ಮತ್ಸಧ್ವಜನು, ಸ ಗ್ರೀಷ್ಮ ಋತು ,ಶರದೃತು, ರಾಜ ನೀತಿ, ವಸಂತ ಋತು ಹೀಗೆ 28 ಅಧ್ಯಾಯಗಳನ್ನು ಒಳಗೊಂಡಿದೆ. ತಮಿಳಿನಲ್ಲಿ ವಿಷ್ಣು ಚಿತ್ತನು ಉಂಡಾಳಮ್ಮನು ಮಹಾಕವಿತ್ವ ರಚಿಸಿದ ವ್ಯಕ್ತಿಗಳು 12 ಮಂದಿ ಆಳ್ವರರುಗಳಲ್ಲಿ ಪ್ರಮುಖ ಸ್ಥಾನವುಳ್ಳವರು ಇವರ ಚರಿತ್ರೆಯನ್ನು ಕಾವ್ಯವಾಗಿ ಬರೆಯುವಂತೆ ದೇವರೇ ನನಗೆ ಆದೇಶವಿತ್ತಂತೆ ಭಾವಿಸಿ ಕೃಷ್ಣದೇವರಾಯನ



ಹೇಳು ಆಶ್ವಾಸಗಳಲ್ಲಿ 878 ಗದ್ಯ ಪದ್ಯಗಳಿಂದ ಕೂಡಿದ ಈ ಕಾವ್ಯವನ್ನು ರಚಿಸಿದ್ದಾನೆ

ಈ ಗ್ರಂಥದ 21ನೇ ಅಧ್ಯಯನ ರಾಜ ನೀತಿ ಅಂತಿದೆ ಇದರಲ್ಲಿ ಒಬ್ಬ ರಾಜನು ಹೇಗೆ ತನ್ನ ರಾಜ್ಯಭಾರವನ್ನು ಮಾಡಬೇಕೆಂಬುದನ್ನು ವಿವರಿಸಲಾಗಿದೆ. ಯಾವುದೇ ಸಂದರ್ಭದಲ್ಲಿಯಾದರೂ ಬೇಸರ ಮಾಡಿಕೊಳ್ಳದೆ ಪ್ರಜೆಗಳನ್ನು ರಕ್ಷಿಸುತ್ತಿರಬೇಕು ಮೊರೆ ಇಟ್ಟರೆ ಕೂಡಲೇ ಅವರಿಗೆ ಒದಗಿರುವ ಸಂಕಷ್ಟವನ್ನು ತೊಲಗಿಸಬೇಕು. ರಾಜನಾದವನು ಸದಾ ಪ್ರಜೆಗಳ ಶ್ರೇಯಸ್ಸನ್ನ ನೋಡಬೇಕು .ತನ್ನ ಕೋಟೆಯ ಕಾವಲು ರಕ್ಷಣೆ ಮೊದಲಾದ ಜವಾಬ್ದಾರಿಗಳನ್ನು ತನ್ನ ಹತ್ತಿರದ ಬಂಧುಗಳಿಗೆ ವಹಿಸಬೇಕು. ಯಾರೆಂದರೆ ಯಾರನ್ನು ನಂಬಬಾರದು ಅವರು ಕೋಟೆಗೆ ಪ್ರಮಾದ ತಂದು ರಾಜ್ಯ ಕ್ಷೀಣಿಸುವುದಕ್ಕೆ ಕಾರಣವಾಗಬಹುದು ಎಲ್ಲ ಕೆಲಸಕ್ಕೂ ಹಣವೇ ಮುಖ್ಯ ಬೇಕಾದಷ್ಟು ಜನ ಸಂಪಾದನೆಯನ್ನು ನಿಲ್ಲಿಸಿ ಅದನ್ನು ಧಾರಾಳ ವಾಗಿ ಖರ್ಚು ಮಾಡ ಬಾರದು ಎಂಬ ನೀತಿಯನ್ನು ಹೇಳಿ ದ್ದಾರೆ. ಎಷ್ಟೇ ಚಿನ್ನವಿದ್ದರೂ ಅದನ್ನು ಲೆಕ್ಕ ಮಾಡಿ ಎಚ್ಚರಿಕೆವಹಿಸುವವರು ಇಲ್ಲದೇ ಹೋದಲ್ಲಿ ಪರಿವಾರವೆಲ್ಲವೂ ಇಷ್ಟಕ್ಕೆ ಕೊನೆಗೆ ಸಿಂಹಾಸನಗಳೇ ಶತ್ರುಗಳ ಪಾಲಾಗಬಹುದು ಹೆಚ್ಚು ಮಕ್ಕಳು ದೊಡ್ಡ ಸಂಸಾರ ಇರುವವನಿಗೆ ದೇವಸ್ಥಾನಗಳ ಮೇಲ್ವಿಚಾರಣೆಯನ್ನು ಕೊಡಬಾರದು ತನ್ನ ಕಷ್ಟಗಳನ್ನು ನೀಗಿಸಿಕೊಳ್ಳಲು ದೇವರ ಹಣ ನಗಗಳಲ್ಲಿ ಅರ್ಧವನ್ನಾದರೂ ಅವನು ಕಳೆದುಬಿಡುತ್ತಾನೆ ಪುನಃ ರಾಜನೇ ಈ ಲೋಪವನ್ನು ಭರ್ತಿ ಮಾಡಬೇಕಾಗುತ್ತದೆ ಆದ್ದರಿಂದ ಒಂಟಿಯಾಗಿರುವವನಿಗೆ ದೇವಾಲಯದ ಅಧಿಕಾರ ಕೊಡು. ಉತ್ತಮ ಕುದುರೆಯನ್ನಾಗಿ ಆಪ್ತಮಿತ್ರನಂತ ಸೇವಕನಿಗೆ ಕೊಡಬೇಕು ರಾಜ ಬಂಧುಗಳಿಗೆ ಕೊಡಬೇಡ ಸಕಾಲದಲ್ಲಿ ಅವುಗಳ ಸದ್ವಿನ ಯೋಗ ಮಾಡಿ ಸಹಾಯಕರಾಗುವವರು ಆಪ್ತಸೇವಕರೇ. ಒಂದು ಕಣ್ಣಿನಿಂದ ನಿದ್ರೆ ಮಾಡುತ್ತಾ ಇನ್ನೊಂದು ಕಣ್ಣಿನಿಂದ ಭೂಮಿಯ ಕಡೆಗೆ ನೋಡುತ್ತಿರುವ ಮರ ಹತ್ತಿದ ಕರಡಿಯಂತೆ ರಾಜನಾದವನು ಸುಖಭೋಗಗಳನ್ನು ಅನುಭವಿಸುವಾಗಲು ಆತ್ಮ ಮತ್ತು ಬಹಿಷ್ಕೃತಗಳನ್ನು ಒಂದು ಕಣ್ಣಿನಿಂದ ನೋಡುತ್ತಿರಬೇಕು ಎನ್ನುತ್ತಾರೆ .



ಶತ್ರುಗಳನ್ನು ಜಯಿಸಲು ರಾಜನು ನಾನೇ ಸ್ವತಃ ಯುದ್ಧಕ್ಕೆ ಹೋಗಬಾರದು ತನ್ನ ನೂರು ಜನ ವೀರರಲ್ಲಿ ಒಬ್ಬನನ್ನು ನಾಯಕನನ್ನಾಗಿ ಮಾಡಿ ಶತ್ರುಗಳ ಮೇಲೆ ಯುದ್ಧಕ್ಕೆ ಕಳಿಸಿಕೊಡಬೇಕು ಅಂತವನ ಕೈಯಲ್ಲಿ ಶತ್ರು ಸೋಲದಿರಬಹುದು ಆದರೂ ಅವನ ಧನ ಸೈನ್ಯ ಬಲ ಅರ್ಧಕಾದ್ರು ಖರ್ಚಾಗುತ್ತದೆ ನಂತರ ಸುಲಭವಾಗಿ ಜಯಿಸಬಹುದು ಅಥವಾ ಬಲ ಕಡಿಮೆಯಾದ ಶತ್ರುವಿಗೆ ಆತನ ರಾಜ್ಯವೆತ್ತು ಅವನನ್ನು ತನ್ನ ಸಾಮಂತನಾಗಿ ಮಾಡಿ ಕೊಳ್ಳಬಹುದು. ಎಂಬ ರಾಜನೀತಿಯನ್ನು ಹೇಳಲಾಗಿದೆ.

ದೇಶದ ಅಭಿವೃದ್ಧಿಗೆ ಅಡವಿಗಳು ಬಹು ಮುಖ್ಯವಾದ ಅವುಗಳನ್ನು ದಟ್ಟವಾಗಿ ಬೆಳೆಸು, ಭೂಮಿಗೆ ಬೆನ್ನೆಲುಬಿನಂತ ಕಾಡುಗಳನ್ನು ಕಳ್ಳರು ಅಪಹರಿಸಿದಂತೆ ಕಾವಲಿಸಿ ಕಾಡುಗಳನ್ನು ಕಡಿಯುವವರಿಗೆ ತುಂಡು ತುಂಡಾಗಿ ಕತ್ತರಿಸುವ ಶಿಕ್ಷೆ ವಿಧಿಸುತ್ತೇನೆ ಎಂಬ ಹೆದರಿಕೆ ಇಡು. ಹೀಗೆ ರಾಜನೀತಿಯನ್ನು ಕುರಿತ ಗ್ರಂಥ ಎಂಬುದನ್ನು ವಿದ್ವಾಂಸರು ಕೃಷ್ಣದೇವರಾಯನ ಅಮುಕ್ತ ಮೌಲ್ಯದಲ್ಲಿ ರಾಜ ನೀತಿಯನ್ನು ವಿವರಿಸಲಾಗಿದೆ.

ರಾಜ ನೀತಿಯನ್ನು ವಿವರಿಸಿರುವ ಈ ಗ್ರಂಥ ರಾಜನೀತಿಯು ಮಧ್ಯೆಯುಗೀನ ರೀತಿ ನೀತಿಗಳಿಗೆ ಹೊಂದಿಕೊಂಡಿದ್ದರು ಇವತ್ತಿನ ರಾಜಕೀಯ ಪರಿಸ್ಥಿತಿಗೆ ಇದು ಅನ್ವಯಿಸುತ್ತದೆ ಅನ್ನುವುದನ್ನು ಗಮನಿಸ ಬಹುದಾಗಿದೆ. ಒಟ್ಟಾರೆ ಈ ಆ ಮುಕ್ತ ಮಾಲ್ಯದ ಗ್ರಂಥವು ಒಂದು ವಿಶಿಷ್ಟ ಗ್ರಂಥವಾಗಿದ್ದು ಕೃಷ್ಣದೇವ ರಾಯನ ರಾಜನೀತಿಯನ್ನು ಈ ಕೃತಿ ಹೇಳುತ್ತದೆ ಎಂಬುದು ವಿದ್ವಾಂಸರ ಅಭಿಪ್ರಾಯ.

# ಅತಿವೃಷ್ಠಿ, ಪ್ರವಾಹ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಿ : ತಂಗಡಗಿ

■ **ಹಂಪಿ ಟೈಮ್ಸ್ ಕೊಪ್ಪಳ**



ಮುಂದಿನ ವಾರದಿಂದ ಜಿಲ್ಲೆಯಲ್ಲಿ ಹೆಚ್ಚಿನ ಮಳೆ ಬೀಳುವ ಸಾಧ್ಯತೆ ಕುರಿತು ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿರುವುದರಿಂದ ಪ್ರವಾಹ ಪರಿಸ್ಥಿತಿ ಎದುರಿಸಲು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಬೇಕು ಎಂದು ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್.ತಂಗಡಗಿ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಶನಿವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಅತಿವೃಷ್ಠಿ ಹಾಗೂ ಪ್ರವಾಹದ ಕುರಿತು ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಬಗೆಗಿನ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಕಳೆದ ಜೂನ್ ಮಾಹೆಯಲ್ಲಿ ಹೆಚ್ಚಿನ ಪ್ರಮಾಣದ ಮಳೆಯಾಗಿತ್ತು. ಜುಲೈ ಮಾಹೆಯಲ್ಲಿ ಮಳೆ ಪ್ರಮಾಣ ಕಡಿಮೆಯಾಗಿದೆ. ಬರುವ ವಾರದಿಂದ ಹೆಚ್ಚಿನ ಮಳೆಯಾಗುವ ಸಾಧ್ಯತೆ ಇದ್ದು, ಅಧಿಕಾರಿಗಳು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಪರಿಶೀಲನೆ ನಡೆಸಿ ಸಿದ್ದತೆ ಮಾಡಿಕೊಳ್ಳಬೇಕು ಎಂದು ಸೂಚಿಸಿದರು.

ಮಳೆಯಿಂದಾಗಿ ಚರಂಡಿ ತುಂಬಿ ಹರಿದು ಅವ್ಯವಸ್ಥೆ ಉಂಟಾಗದಂತೆ ನೋಡಿಕೊಳ್ಳಬೇಕು. ನೀರಿನ ಪೈಪ್ ಲೈನ್‌ಗಳ ದುರಸ್ಥಿಗೆ ಗಮನ ಹರಿಸಬೇಕು ಎಂದರು. ಪ್ರಸ್ತುತ ತುಂಗಭದ್ರಾ ಜಲಾಶಯದಿಂದ ನದಿಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಬಿಡುತ್ತಿರುವುದರಿಂದ ನದಿ ಪಾತ್ರ ದ ಗ್ರಾಮಗಳು ತೊಂದರೆಗೆ ಒಳಗಾಗು ವ ಸಾಧ್ಯತೆ ಇರುತ್ತದೆ. ಆದ್ದರಿಂದ ಅಂತಹ ಗ್ರಾಮಗಳನ್ನು ಗುರುತಿಸಿ ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳ ಬೇಕು. ಒಂದು ವೇಳೆ ಪ್ರವಾಹ ಪರಿಸ್ಥಿತಿ ಎದುರಾದಲ್ಲಿ ಅವಶ್ಯಕ ಸಂದರ್ಭ ಬಂದಲ್ಲಿ ಗ್ರಾಮಸ್ಥರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲು ಸುರಕ್ಷಿತ ಸ್ಥಳಗಳನ್ನು ಗುರುತಿಸಬೇಕು. ನದಿಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಬಿಡುಗಡೆ ಮಾಡು ವಾಗ ನದಿ ಪಾತ್ರದ ಜನರು ಎಚ್ಚರಿಕೆ ವಹಿಸುವಂತೆ ಡಂಗುರಗಳ ಮೂಲಕ ಜಾಗೃತಿ ಮೂಡಿಸಬೇಕು.

>>4

# ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಕಟಣೆಗೆ ಶೇ.50ರ ರಿಯಾಯಿತಿ

■ **ಹಂಪಿ ಟೈಮ್ಸ್ ಕೊಪ್ಪಳ**


ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ 2024ರ ಆಗಸ್ಟ್ ತಿಂಗಳು ಪೂರ್ತಿ ಕನ್ನಡ ಪುಸ್ತಕ ಪ್ರಾಧಿಕಾರದ ಎಲ್ಲಾ ಪುಸ್ತಕಗಳನ್ನು ಶೇಖಡಾ 50ರ ರಿಯಾಯಿತಿ ದರಗಳಲ್ಲಿ ಮಾರಾಟ ಮಾಡಲಾಗುತ್ತಿದ್ದು, ಪುಸ್ತಕ ಪ್ರಿಯರು ಈ ಅವಕಾಶ ಬಳಸಿಕೊಳ್ಳಬೇಕು.

ಬೆಂಗಳೂರಿನ ಕನ್ನಡ ಭವನದ ಸಿರಿಗನ್ನಡ ಪುಸ್ತಕ ಮಳಿಗೆಯಲ್ಲಿ ಹಾಗೂ ಎಲ್ಲಾ ಜಿಲ್ಲೆಗಳ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದಿಂದ ತೆರೆಯಲಾದ ಎಲ್ಲಾ ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆಗಳಲ್ಲಿ ಈ ರಿಯಾಯಿತಿ ಸೌಲಭ್ಯ ದೊರೆಯಲಿದೆ. ಅಲ್ಲದೆ ಕನ್ನಡ ಪುಸ್ತಕ ಪ್ರಾಧಿಕಾರದ ಆನ್‌ಲೈನ್ https://kpp.karnataka.gov.in (ಆನ್‌ಲೈನ್ ಪುಸ್ತಕ ಖರೀದಿಗೆ ಇಲ್ಲಿ ವೀಕ್ಷಿಸಿ ವಿಭಾಗ) ನಲ್ಲಿ ಕೂಡ ಈ ಶೇ.50ರ ರಿಯಾಯಿತಿ ಲಭ್ಯವಿದೆ.

ಕನ್ನಡ ಪುಸ್ತಕ ಪ್ರಾಧಿಕಾರವು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಎಲ್ಲಾ ಪ್ರಕಾರದ ಸಾಹಿತ್ಯ ಕೃತಿಗಳನ್ನು ಈ ವರೆಗೆ ಪ್ರಕಟಿಸುತ್ತಾ ಬಂದಿದೆ. ಇವುಗಳಲ್ಲಿ ವ್ಯಕ್ತಿಚಿತ್ರಗಳು, ನಾಟಕಗಳು, ಅಲೆಮಾರಿ ಸಮುದಾಯ, ವೈದ್ಯಕೀಯ, ಪ್ರಾಚೀನ ಕನ್ನಡ ಸಾಹಿತ್ಯ, ಜಾನಪದ, ಪರಿಸರ, ಕೃಷಿ ಹೀಗೆ ಹಲವು ಹತ್ತು ಪ್ರಕಾರಗಳಲ್ಲಿ ಸಾಹಿತ್ಯ ಕೃತಿಗಳನ್ನು ಇದುವರೆಗೆ ಸುಮಾರು 704 ಶೀರ್ಷಿಕೆಗಳನ್ನು ಮುದ್ರಿಸಿ ಪ್ರಕಟಿಸಿದೆ. ಅತ್ಯಂತ ಮೌಲಿಕವಾದ, ಪ್ರಾಜ್ಞರಿಂದ ರಚಿತವಾದ ಈ ಕೃತಿಗಳನ್ನು ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬ ಉದ್ದೇಶ ಕನ್ನಡ ಪುಸ್ತಕ ಪ್ರಾಧಿಕಾರದ್ದಾಗಿದೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಕೆ.ಬಿ. ಕಿರಣ್ ಸಿಂಗ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕವಿ ಮನಸು

## ಶಂಕೆಯೇಕೆ



ಸ್ವಚ್ಛವಾಗಿ ಸ್ಪಟಿಕದಂತೆ
ಹರಿವ ನೀರು ನದಿಯಲಿ
ಹಸಿರು ವನವು ಮೆರೆಯುತಿಹುದು
ನದಿಯ ಎರಡು ದಡದಲಿ

ಶ್ವಾನವೊಂದು ದಾಹದಿಂದ
ಅತ್ತ ಇತ್ತ ನೋಡಿತು
ಪಕ್ಕದಲ್ಲಿ ಹರಿವ ನದಿಯ
ನಾಯಿ ಅಲ್ಲಿ ಕಂಡಿತು

ಜಲವ ಕುಡಿಯಲೆಂದು ನಾಯಿ
ನದಿಯ ಸನಿಹ ಹೋಯಿತು
ಕುಡಿಯುತಿರಲು ತನ್ನ ಬಿಂಬ
ನೀರಿನಲ್ಲಿ ನೋಡಿತು

ತನ್ನ ರೂಪ ಬದಲಲಿಲ್ಲ
ಮೊದಲಿನಂತೆ ಇರುವುದು
ಮೇಕೆಯೇನೊ ಎಂಬ ಶಂಕೆ
ಮನಜಗೇಕೆ ಬರುವುದು

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ದೂರದ ಬೆಟ್ಟ

ದೂರದ ಬೆಟ್ಟ ನುಣ್ಣಗೆ
ಕಾಣುವುದು ಚೆಂದ ಕಣ್ಣಿಗೆ
ರಂಗಿನ ಬಣ್ಣ ಕನಸಿಗೆ
ತೀರದ ದಾಹ ಮನಸಿಗೆ

ಹತ್ತಿರದಿ ಹೋಗಿ ನೋಡು
ಬದುಕಿದು ಮಾಯೆಯ ಬೀಡು
ಆಸೆ ವ್ಯಾಮೋಹದ ಗೂಡು
ಹೊಮ್ಮಲಿ ಅರಿವಿನ ಹಾಡು

ಮನಸಿದು ಎಂದಿಗೂ ಮರುಳು
ಅರಿಷಡ್ವರ್ಗಗಳು ಹಾಕಿವೆ ಉರುಳು
ಪಠಿಸಲಿ ನಾಮವ ಕೊರಳು
ಹೊಳೆಯುತ ಜ್ಞಾನದ ಹರಳು

– ಚೇತನ ಭಾರ್ಗವ ಬೆಂಗಳೂರು

## ಸ್ನೇಹ ಸುಧೆ

ತೊರೆದರಷ್ಟೇ ಅಸೂಯೆ
ಸವಿಯ ಬಹುದು ಸ್ನೇಹ ಸುಧೆ.
ಕೃಷ್ಣ, ಕುಚೇಲನ ಸ್ನೇಹ ನೆನೆಯೇ
ಅದು ಸಾರುವುದು ಗೆಳೆತನ ಒಂದೇ.

ಕರ್ಣ, ದುರ್ಯೋಧನನ ಸ್ನೇಹ ಅನನ್ಯ
ಕಾರಣ ನಂಬಿಕೆಗೆ ಕೊಟ್ಟರಲ್ಲ ಪ್ರಾಮುಖ್ಯ.
ಕೃಷ್ಣ, ಅರ್ಜುನನೊಂದಿಗಿನ ನಂಟು
ಭಕ್ತಿ, ನಿಷ್ಠೆ ಬಿಡಿಸಲಾಗದ ಗೆಳೆತನದ
ಗಂಟು.

ಯುಗ ಯುಗಗಳೇ ಕಳೆದರು
ಮರೆಯಲಾಗದ ಗೆಳೆಯರು ಇವರು.
ಕೊಟ್ಟರು ಕೊಡದಿದ್ದರೂ, ಹೇಳಿದರು
ಹೇಳದಿದ್ದರೂ,
ನಿಸ್ವಾರ್ಥ ಸ್ನೇಹದ ಸ್ವಾದ
ಎಂದೆಂದಿಗೂ ಮೇರು.

– ಮಂಜುಶ್ರೀ ಮುರಳೀಧರ್

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ಸಾಂತ್ವನ, ಸಾಂಗತ್ಯ ಮತ್ತು ಸಂಬಂಧಗಳ ನಡುವೆ...?



ಸಾಕಾಗಿ ಹೋಗಿದೆ ನನಗೆ ಎನ್ನುವ ಮೊದಲು, ಇವಳೊಂದಿಗಿನ ಈ ಗುದ್ದಾಟಕ್ಕೆ ಕೊನೆ ಎಂಬು ದಿಲ್ಲವೆ..? ಎನ್ನುವ ಮೊದಲು, ಅತಿಯಾ ಯಿತು ಇದು ಎಷ್ಟೂ ಎಂದು ಸಹಿಸಿಕೊಳ್ಳುವುದು, ಹೀಗೆ ಸಹಿಸಿಕೊಳ್ಳುತ್ತಾ ಹೋದರೆ ತಲೆ ಕೆಟ್ಟು ಹುಚ್ಚಾಸ್ಪತ್ರೆ ಸೇರಬೇಕಾದೀತು. ಗಂಡು ಜೀವ ಎಂದರೆ ಇಷ್ಟೇನಾ..? ಹೊರಗಡೆ ಕತ್ತೆಯಂತೆ ದುಡಿಯಬೇಕು ಮನೆಗೆ ಬೇಕಾಗಿದ್ದನ್ನೆಲ್ಲ ತಂದಾಕಬೇಕು, ಇದ್ದರೆ ತಿನ್ನಬೇಕು ಇಲ್ಲದ್ದಿದ್ದರೆ ಬಾಯಿ ಮುಚ್ಚಿಕೊಂಡಿರಬೇಕು. ಈ ಸುಖಕ್ಕಾಗಿ ಮದುವೆ ಹೆಂಡತಿ ಮಕ್ಕಳು ಈ ಸಂಸಾರ ಬೇಕಿತ್ತಾ..? ಎನ್ನುವ ಮೊದಲು? ಹೀಗೇಕಾಯಿತು..? ಇಂತಹ ಬದಲಾವಣೆಗೆ ಏನಾದರೂ ಕಾರಣವಿರಬಹುದಲ್ಲವೆ..? ಇವಳು ಅವಳೇ ಅಲ್ಲವೇ..? ನಾನು ಮೆಚ್ಚಿ ಮೋಹಿಸಿ ಹಿಂದೆ ಬಿದ್ದು ಗೋಗರೆದು ಪ್ರೀತಿಸಿ ಮನೆಯವರ ವಿರೋದ ಕಟ್ಟಿಕೊಂಡು ನಾವು ಜೀವನದಲ್ಲಿ ಗೆದ್ದೇ ಗೆಲ್ಲುತ್ತೇವೆ ಎಂದು ಆಣೆ ಪ್ರಮಾಣಗಳನ್ನು ಮಾಡಿ ಒಪ್ಪಿಸಿ ಕೈಹಿಡಿದು ಕರೆತಂದವಳಲ್ಲವೆ. ಕಾರಣವೆನಾದರೂ...? ಇದ್ದಿರಬಹುದಲ್ಲವೆ ಎನ್ನುವ ಒಂದು ಸಣ್ಣ ಸಹಜ ಮಾತಿಗಾದರೂ... ಅವಳಿಗೆ ಅವಕಾಶವನ್ನು ಮಾಡಿಕೊಡಬೇಕಲ್ಲವೆ? ಅವಳನ್ನು ಅವಳ ಸ್ಥಾನದಲ್ಲಿ ಅವಳಿದ್ದಂತೆ ಒಪ್ಪಿಕೊಳ್ಳದಿದ್ದರೂ, ಉದಾಸೀನ ಮಾಡದೆ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಲ್ಲವೆ.

ಒಂದೊಮ್ಮೆ ವಿಶ್ವಾಸಕ್ಕೆ ತೆಗೆದುಕೊಂಡಿದ್ದೇ ಆದರೆ.... ಏಕೆ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಎನ್ನುವುದನ್ನು ಮೊದಲು ಗಮನಿಸುವುದಾದರೆ, ಅವಳು ಎಂದರೆ ಕೇವಲ ಅವಳಲ್ಲ ಅವಳು ಮಗಳು, ಸಹೋದರಿ, ಪ್ರೇಯಸಿ, ಹೆಂಡತಿ, ಅಮ್ಮನಾಗಿ ಮನೆಯ ಒಳಗೂ ಮತ್ತು ಹೊರಗು ತನ್ನ ಜವಾಬ್ದಾರಿಗಳನ್ನು ನಿಭಾಯಿಸುವುದರ ಜೊತೆಗೆ ಅವಳು ಕೇವಲ ಅವಳಲ್ಲವಲ್ಲ ...! ಅಂದರೆ ಸಹಜವಾಗಿ ಸೂಕ್ಷ್ಮ ಸಂವೇದನಕ್ಕೆ ಸ್ವಲ್ಪ ಹೆಚ್ಚೇ ತೆರೆದುಕೊಳ್ಳುವಅವಳುಸ್ವತಃಅವಳೊಂದಿಗೂಅವಳುಹೋರಾಡಬೇಕಲ್ಲವೆ? ಅವಳ ಮನೋಮಂಡಲದಲ್ಲಿನ ಹೊಯ್ದಾಟ ಗಳಿಗೆ ಪರಿಹಾರ ಕಂಡುಕೊಳ್ಳಬೇಕಲ್ಲವೆ, ನೆನಪಿರಲಿ ಎಲ್ಲಿಯವರೆಗೂ ಅವಳ ಮನೋಮಂಡಲದ ತಲ್ಲಣಗಳು ತಿಳಿಯಾಗುವುದಿಲ್ಲವೂ ಎಲ್ಲಿಯವರೆಗೆ ಅವಳ ಮಾನಸಿಕ ಘಾಸಿಗಳು ಮಾಯವಾಗುವುದಿಲ್ಲವೂ ಅಲ್ಲಿಯವರೆಗೂ ಅವಳು ಅವಳಾಗಿರುವುದಿಲ್ಲ.

ಈಗ ಅವಳಿಗೇನು ಮಾನಸಿಕ ತಳಮಳ..? ಮದುವೆಯಾಗಿದೆ ಮಕ್ಕಳಿದ್ದಾರೆ ತಂದುಹಾಕುವುದಕ್ಕೆ ನಾನಿದ್ದೇನೆ, ಮನೆ ಕಾರು ಇನ್ನೇನು ಬೇಕು ಇವಳ ಮನಸ್ಸು ನೆಟ್ಟಗಾಗಲು ಎನ್ನುವ ಮನಸ್ಥಿತಿ ಇದ್ದರೆ, ಖಂಡಿತವಾಗಿ ಅದನ್ನು ಬದಿಗಿಟ್ಟು ಬಿಡಿ. ಇರಲು ಮನೆ ಕಾರು ಬಂಗಲೆ ಆಳು–ಕಾಳುಗಳಿದ್ದರೂ ಅವಳನ್ನು ಅರಿತುಕೊಳ್ಳುವ ಮನಸ್ಥಿತಿ ಇಲ್ಲದಿದ್ದರೆ ಏನು ಉಪ ಯೋಗ. ಇದೆಲ್ಲ ಇಲ್ಲದೆಯೋ ಅವಳು ಖುಶಿಯಾಗಿರಬಲ್ಲಳು, ಇನ್ನೇನು ಬೇಕು? ಎಂದು ಕೇಳುವ ಮೊದಲು... ಇನ್ನೇ ನೋ ಬೇಕಾಗಿದೆ ಇವಳಿಗೆ ಎನ್ನುವ ಮನಸ್ಥಿತಿ ನಿಮ್ಮ ದಾಗಿದ್ದರೆ, ಅದರ ಪಲಿತಾಂಶ ಬೇರೆಯದ್ದೇ ಆಗಿರುತಿತ್ತಲ್ಲವೆ. ಒಮ್ಮೆ ಯೋಚನೆ ಮಾಡಿ ನೋಡಿ.



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Scan For Digital Colourful
HAMPI TIMES E-paper

ಅವಳ ಮೈ–ಮನಸ್ಸಿಗೆ ಅವಿಚ್ಚನ್ನ ವಾದ ಸಂಬಂಧವಿದೆ. ಮಾನಸಿಕ ಸಮಸ್ಯೆಗೂ ಮತ್ತು ಅವಳಲ್ಲಾಗುವ ದೈಹಿಕ ಬದಲಾವಣೆಗೂ ನೇರ ಸಂಬಂಧವಿದೆಯೇ ಎನ್ನುವು ದನ್ನು ಮೊದಲು ನಾವು ಅರ್ಥ ಮಾಡಿಕೊಳ್ಳಬೇಕು.

ಅವಳ ದೈನಂದಿನ ದಿನಚರಿಯಲ್ಲಿನ ಬದಲಾವಣೆಗಳಿಗೆ, ಅವಳ ಅತಿ ಯಾದ ವರ್ತನೆಗಳಿಗೆ, ಅತಿ ಯಾಯಿತು ಇವಳದು ಎನ್ನುವ ನಿಮ್ಮ ಆರೋಪಕ್ಕೆ ಕಾರಣಗಳು ಅನೇಕ ಇರಬಹುದು. ಯಾವುದೊ ಹಳೆಯ ನೋವಿರ ಬಹುದು ಅದರ ನೆನಪಿರಬಹುದು, ಅವಳ ಚಿಕ್ಕವ ಯಸ್ಸಿನಲ್ಲಿ ಘಟಿಸಿದ ಯಾವುದೊ ಘಟನೆಯಾಗಿರಬಹುದು ಅದರ ಭಯವಿರಬಹುದು, ಯಾವುದೋ ಘಟನೆ ಅವಳ ಮನಸ್ಸನ್ನುಅತಿಯಾಗಿ ಘಾಸಿಗೊಳಿಸಿ ಅವಳ ವಿಚಾರದಾರೆಯನ್ನೆ ಬದಲಾಯಿಸಿರಬಹುದು ಅಥವಾ ಕೆಲವು ವಂಶ ಪಾರಂಗತವಾಗಿ ಅನುವಂಶಿಯವಾಗಿ ಹುಟ್ಟಿನಿಂದಲೇ ಜೊತೆ ಯಾಗಿರುವಂತಹ ಸಮಸ್ಯಗಳೂ ಆಗಿರಬಹುದಲ್ಲವೆ. ಈ ಎಲ್ಲಾ ಕಾರಣಗಳಿಂದ ಅವಳ ಮನಸ್ಸು ಘಾಸಿಗೊಂಡು ಅದರ ಪರಿಣಾಮ ಅವಳ ವರ್ತನೆ, ಯೋಚನೆ ಹಾಗು ಅವಳ ಭಾವನೆಗಳ ಮೇಲೆ ಪ್ರಭಾವ ಬೀರಿ ಅವಳ ದೈನಂದಿನ ಪ್ರಾಪಂಚಿಕ ವ್ಯವಹಾರದಲ್ಲಿ ವ್ಯತಿರಿಕ್ತ ಪರಿಣಾಮಕ್ಕೆ ಕಾರಣವಾಗಿರಲೂ ಸಾಧ್ಯವಿದೆಯಲ್ಲವೆ?.

ಏಕೆ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಎನ್ನುವುದು ಅರ್ಥವಾಗಿದ್ದರೆ? ಒಟ್ಟಾರೆಯಾಗಿ ಸಹಜವಾಗಿ ಅಪೇಕ್ಷಿತ ಮನುಷ್ಯನ ವಿಚಾರ ಮತ್ತು ವರ್ತನೆಗಳು ಅವಳ ಅಂದರೆ ಮನುಷ್ಯನ ಮನಸ್ಥಿತಿ, ಒತ್ತಡದ ನಿಭಾಹಿಸುವಿಕೆ ಸಂದರ್ಭಕ್ಕೆ ತಕ್ಕಹಾಗೆ ಪ್ರತಿಕ್ರಿಯೆಸುವಿಕೆ ಮತ್ತು ವ್ಯವಹಾರಿಕ ಚಾಕಚಕ್ಕತೆ ಭಾವನೆಗಳನ್ನು ನಿಯಂತ್ರಿಸುವಲ್ಲಿ ಮಾನಸಿಕ ಆರೋಗ್ಯದ ಪಾತ್ರ ಹಿರಿದಾಗಿರುತ್ತದೆ ಎನ್ನುವುದು ಸರ್ವ ಕಾಲಿಕ ಸತ್ಯ ಹಾಗಾಗಿ ಮೊದಲು ನಾವು ಅವಳ ಮನಸ್ಸನ್ನು ಅರ್ಥಮಾಡಿಕೊಳ್ಳಬೇಕು.

ಅರೇ ನನಗೂ ಒಂದು ಮನಸ್ಸಿದೆ, ಅದನ್ನೂ ಯಾರಾದರು ಅರ್ಥ ಮಾಡಿಕೊಳ್ಳಬೇಕಲ್ಲ ಎನ್ನುವುದಿದ್ದರೆ ಅದು ಸರಿಯೇ, ಹಾಗೆಂದು ನೀರೀಕ್ಷೆ ಮಾಡುವ ನಾವು ಇನ್ನೊಬ್ಬರನ್ನು ಅದರಲ್ಲೂ ಅವಳ ಕಡೆಗೆ ಬೊಟ್ಟು ಮಾಡಿ ತೋರಿಸುವ ಮೊದಲು ಅವಳನ್ನೊಮ್ಮೆ ಅರಿಯುವ ಅವಳೊಂದಿಗೆ ನಾಲ್ಕು ಸಾಂತ್ವನದ ಮಾತುಗಳನ್ನಾಡುವ, ಅವಳೊಟ್ಟಿಗೆ ಬಿಡು ಮಾರಾಯ್ತಿ ನಾನಿದನಲ್ಲ ಐ ವಿಲ್ಲ್ ಟೇಕ್ ಕೇರ್ ಎಂದು ಅವಳ ಕೆನ್ನೆಯನ್ನೊಮ್ಮೆ ನಿನ್ನ ಬೊಗಸೆಯಲ್ಲಿ ತುಂಬಿಕೊಂಡು ಆಪ್ತವಾಗಿ ಅವಳ ಕಣ್ಣಿನಲ್ಲಿ ಕಣ್ಣನ್ನಿಟ್ಟು ಪ್ರೀತಿಯಿಂದ ಹೇಳಿ ನೋಡಿ.

ಬೆಳಗಾದರೆ ನಿನ್ನದು ಇದೇ ಗೋಳಾಯಿತು, ಇನ್ನು ನನ್ನ ದಿನ ಅಷ್ಟೇ ಎನ್ನುವ ಬದಲಿಗೆ. ಇಷ್ಟೆ ತಾನೆ, ಬಿಡು ನಿನ್ನ ಕಷ್ಟವೆಲ್ಲ ನನ್ನದೇ, ನನ್ನದೇನಿದ್ದರು ನಿನ್ನದೇ ಅಲ್ಲವೆ..? ನಾನು ಮತ್ತು ನೀನು ಸೇರಿ ಒಟ್ಟಾರೆಯಾಗಿ ಎದಿರಿಸೋಣ, ಅದೇನೆ ಬರಲಿ ಬಿಡು ದೇವರಿದ್ದಾನೆ ಜೊತೆಗೆ ನಾನಿದ್ದೇನೆ ನನ್ನೊಂದಿಗೆ ನೀನು ಇರುವುದೇ ಆನೆ ಬಲ ನನಗೆ ಎಂದು ನಿಮ್ಮ ಕೈಯಲ್ಲೊಮ್ಮೆ ಅವಳ ಕೈಯನ್ನು ಬಿಗಿಯಾಗಿ ಹಿಡಿದು ಒಂದು ಆತ್ಮೀಯ ಅಪ್ಪುಗೆಯೊಂದಿಗೆ ದಿನ ಪ್ರಾರಂಭಿಸಿ ನೋಡಿ.

ರಾತ್ರಿಯಾಯಿತು ಎಂದರೆ ಸಾಕು ನೀನು ನಿನ್ನಷ್ಟಕ್ಕೆ ನಿನ್ನ ಕೆಲಸ ಕಾರ್ಯಗಳನ್ನು ಮುಗಿಸಿಟ್ಟು ನೇರವಾಗಿ ತಟ್ಟೆಗೆ ಕೈಹಾಕಿ ಸಿಕ್ಕಷ್ಟು ತಿಂದುಕೊಂಡು, ನಾಳೆ ನಾನು ಬೆಳಗ್ಗೆನೆ ಬೇಗ ಹೊರಡಬೇಕು ಎಂದು ಸೂಚ್ಚವಾಗಿ ನನ್ನ ಅಗತ್ಯಗಳನ್ನೆಲ್ಲ ಸಿದ್ದಪಡಿಸಿ ಇಡು ಎನ್ನುವ ಆಲಿಖಿತ ಹೇಳಿಕೆಯನ್ನ ಹೊರಡಿಸಿ ಹಾಸಿಗೆಯಲ್ಲಿ ಕಾಲು ಚಾಚುವ ಮೊದಲು, ನಿನಗೆ ಹೊತ್ತೊತ್ತಿಗೆ ಬೇಕಾದ್ದೆನ್ನೆಲ್ಲ ಬೇಕು ಎನ್ನುವ ಮೊದಲೆ ಸಿದ್ದವಾಗಿರುವಂತೆ ನೋಡಿಕೊಳ್ಳುವುದರ ಜೊತೆಗೆ, ನಿನ್ನ ಮಕ್ಕಳಿಗೆ, ಮನೆಗೆ, ಮನೆಯಲ್ಲಿ ಇದ್ದರೆ ಅಪ್ಪ ಅಮ್ಮನಿಗೆ ಎಲ್ಲಾ ಮೂಲಬೂತ ಅಗತ್ತೆತ್ತೆಗಳು ತಾವಾಗಿಯೆ ಸಿದ್ದಗೊಳ್ಳುವುದಿಲ್ಲ ಎನ್ನುವ ಸಣ್ಣ ಅರಿವಾದರೂ ಇರಬೇಕಲ್ಲವೆ..? ಇದ್ದಿದ್ದೆ ಆದರೆ ಪರಸ್ಪರ ಅದು ಒಂದು ವಿಶ್ವಾಸ ಭರಿತ ಪವಿತ್ರವಾದ ಸಂಬಂಧ ಎನಿಸಿಕೊಳ್ಳುತ್ತದೆ. ಇಲ್ಲವಾದರೆ ಅದೊಂದು ಈ ವ್ಯವಸ್ಥೆಯೊಳಗಿನ ಅವಕಾಶವಾದಿತನ ಎನಿಸಿಕೊಳ್ಳುವುದಿಲ್ಲವೆ..? ಒಮ್ಮೆ ಯೋಚಿಸಿ ನೋಡಿ ಇದೆಲ್ಲ ಇಲ್ಲವಾದರೆ ಈ ಪ್ರೀತಿ, ಹೊಂದಾಣಿಕೆ, ಸಾಂತ್ವಾನ, ಸಾಂಗತ್ಯ ಮತ್ತು ಸಂಬಂಧಗಳ ಅರ್ಥ ಬೇರೇನೋ ಎನ್ನಿಸಿಬಿಡುವುದಿಲ್ಲವೆ. ಇಷ್ಟೆಲ್ಲ ಗೊತ್ತಾದ ಮೇಲೂ ಅವಳೇಕೆ ಹೀಗೆ.....? ಎಂದರೆ.

# ಇದ್ದಾಗ ಕೈ ಹಿಡಿದು, ಏನು ಇಲ್ಲದಿದ್ದಾಗ ಮೇಲಕ್ಕೆತ್ತುವವ ನಿಜವಾದ ಗೆಳೆಯ

ಜೀವನದಲ್ಲಿ ಗೆಳೆತನಕ್ಕೆ ಮಹತ್ತರವಾದ ಸ್ಥಾನವಿದೆ. ಮಾನವ ಎಂದಿಗೂ ಸಂಘಜೀವಿ. ಉತ್ತಮ ಗೆಳೆಯ/ಗೆಳತಿಯರ ಗುಂಪು ಉತ್ತಮ ಸಾಧನೆ ಮತ್ತು ಭವಿಷ್ಯವನ್ನು ಸೃಷ್ಟಿಸಿರುವ ಅನೇಕ ಉದಾಹರಣೆಗಳಿವೆ. ಗೆಳೆತನವೂ ಗಂಡು ಹೆಣ್ಣು ಎಂಬ ಬೇಧವಿಲ್ಲದೆ ಉಂಟಾಗುವ ರಕ್ತ ಸಂಬಂಧವನ್ನು ಮೀರಿದ ಒಂದು ಬಂಧನವಾಗಿದೆ. ಪ್ರತಿಯೊಬ್ಬ ಮನುಷ್ಯನ ಜೀವನದಲ್ಲಿ ಗೆಳೆತನದ ಬಗ್ಗೆ ಸಿಹಿ ಮತ್ತು ಕಹಿ ಅನುಭವಗಳಿರುತ್ತವೆ.



ಅಂದು ನಮ್ಮೂರಿನ ಜಾತ್ರೆ, ಅಮ್ಮನ ಹಣದ ಡಬ್ಬಿಯಿಂದ ಹಣ ತಂದು ಒಂದೇ ಬಣ್ಣದ ಅಂಗಿ ಧರಿಸಿ, ಒಂದೇ ಬೀಡಿಂಯನ್ನು ಎಲ್ಲರೂ ಕೂಡಿ ಕದ್ದು ಸೇದುತ್ತಿರಲು ಅಪ್ಪನಿಂದ ಒದೆ ತಿಂದ ಘಳಿಗೆ ಮರೆ ಯಲು ಸಾಧ್ಯವೆ? ಬಣ್ಣದ ಚೆಸ್ಮ, ಜೀನ್ಸ್ ಪ್ಯಾಂಟ್, ಟಿ –ಶರ್ಟ್ ಗೆಳೆಯನಿಗೆ ತೊಡಿಸಿ ಸಂಭ್ರಮದಿ ಹುಟ್ಟುಹಬ್ಬ ಮಾಡಿ ಹರ್ಷಿಸು ವವನು ನಿಜವಾದ ಗೆಳೆಯ.

ಮುನಿಸಿಕೊಂಡಾಗ ದೂರ ತಳ್ಳಿ ಹೋಗುವ, ವಿರೋಧಿ ತಂಡದ ಹುಡುಗರು ನನ್ನ ಹೊಡೆಯಲು ಬಂದಾಗ, ಕೋಪ ಮುನಿಸು ಮರೆತು ನನ್ನ ಪರವಾಗಿ ಅವರೊಂದಿಗೆ ಜಗಳವಾಡುವವ, ಕಾಲು ಜಾರಿ ಕೆಳಗೆ ಬಿದ್ದಾಗ ನನ್ನನ್ನು ನೋಡಿ ಗೇಲಿ ಮಾಡುತ ನಕ್ಕು ನಿಧಾನಕ್ಕೆ ಮೇಲೆತ್ತಿ ಧೈರ್ಯ ತುಂಬುವವ, ಒಂದೇ ಬೈಕ್ ಮೇಲೆ 5 ಗೆಳೆಯರು ಸವಾರಿ ಮಾಡಿ ಕಾಡಿನ ನಡುವೆ ಪೆಟ್ರೋಲ್ ಮುಗಿದಾಗ ದೆವ್ವಗಳ ಭಯದಿಂದ ಗಡಿಬಿಡಿಯಲ್ಲಿ ಎಲ್ಲರೂ ಗಾಡಿ ಬಿಟ್ಟು ಓಡುವ, 35 ಕಿಲೋ ತೂಕ ಇರುವ ಇವನು ಗೆಳೆಯನ ಅಪ್ಪನಿಗೆ ಅಪಘಾತವಾದಾಗ ರಕ್ತದಾನ ಮಾಡುವ ಸಾಹಸ ಮಾಡುವವನು.

ಗೆಳೆಯನ ಸಹೋದರಿಯ ಮದುವೆಯಲ್ಲಿ ಹಗಲು ರಾತ್ರಿ ಕೆಲಸ ಮಾಡಿ ಸಂಭ್ರಮಿಸುವವ, ಗೆಳೆಯನ ಮದುವೆಯ ದಿನ ಬಿಕ್ಕಿ ಬಿಕ್ಕಿ ಅಳುವವ (ಆತ್ಮೀಯ ಗೆಳೆಯ ಹೆಂಡತಿ ಪಾಲಾದ ಎನ್ನುವ ಭಯ), ದುಃಖದಲ್ಲಿ ದುಃಖಿಸಿ, ಖುಷಿಯಲ್ಲಿ ಖುಷಿ ಖುಷಿಯಾಗಿರುವವ, ಇದ್ದಾಗ ಕೈ ಹಿಡಿದು, ಏನು ಇಲ್ಲದಿದ್ದಾಗ ಮೇಲಕ್ಕೆತ್ತುವವ ನಿಜವಾದ ಗೆಳೆಯ. ಇಲ್ಲಿ ಯಾವುದೆ ರಕ್ತಸಂಬಂಧ ಇಲ್ಲ, ಭೇದ ಭಾವ, ಜಾತಿ ಮತ, ಆಸ್ತಿ ಅಂತಸ್ತು ಯಾವುದು ಇಲ್ಲ, ಎಲ್ಲದಕ್ಕೂ ಮುಕ್ತ ಅವಕಾಶ, ಹೃದಯಗಳ ನಡುವೆ ಬೆಸೆದಿರುವ ಪವಿತ್ರ ಬಂಧನವೆ ನಿಜವಾದ ಗೆಳೆತನ.

ಕೃಷ್ಣ ಸುಧಾಮರು ಈಗಲೂ ಇದ್ದಾರೆ. ನೀನು ಕೃಷ್ಣ ಆದರೆ ಸುಧಾಮನಿಗೆ ಸಹಕರಿಸು, ನೀನು ಸುಧಾಮನಾದರೆ ಕೃಷ್ಣನನ್ನು ಗೌರವಿಸು.



– ನಂದಿನಿ ಸನಬಾಲ್
ಶಿಕ್ಷಕಿ, ಗುಲ್ಬರ್ಗಾ

# ರಕ್ತ ಸಂಬಂಧಕಿಂತ ಮೀರಿದ ಬಂಧ...?



ಎಲ್ಲರಿಗೂ ಗೊತ್ತಿರುವ ಹಾಗೆ ಇಂದು ಸ್ನೇಹಿತರ ದಿನ ರಾಷ್ಟ್ರೀಯ ಸ್ನೇಹ ದಿನವಾಗಿ ಆಗಸ್ಟ್ ಮೊದಲ ಭಾನುವಾರದಂದು ಆಚರಿಸಲಾಗುತ್ತದೆ. ಸ್ನೇಹಕ್ಕಾಗಿ ಮೀಸಲಾದ ವಿಶೇಷ ದಿನದ ಆಚರಣೆ ಎನ್ನಬಹುದು. ಜಗತ್ತಿನಲ್ಲಿ ಎಲ್ಲ ಬಂಧ ಮೀರಿದ ಸಂಬಂಧ ಎಂದರೆ ಅದು ಸ್ನೇಹ. ಸ್ನೇಹ ಎಂಬ ಪದಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ.

ಪುರಾಣ ಕಾಲದಿಂದಲೂ ಸ್ನೇಹಕ್ಕಿರುವ ಬೆಲೆ ಬೇರೆ ಯಾವ ಸಂಬಂಧಕ್ಕೂ ಇಲ್ಲ ಎನ್ನಬಹುದು. ಸ್ನೇಹ ಬಂಧವನ್ನು ಸಂಭ್ರಮಿಸುವ ಸುಂದರ ದಿನ ಸ್ನೇಹಿತರ ದಿನಾಚರಣೆ. ಸ್ನೇಹವನ್ನು ಆಚರಿಸುವ, ಸ್ನೇಹಿತರನ್ನು ಸ್ಮರಿಸುವ, ಸ್ನೇಹವನ್ನು ಸಂಭ್ರಮಿಸುವ ಈ ದಿನ ಪ್ರಪಂಚದಾದ್ಯಂತ ಬಹಳ ವಿಶೇಷ.

ನಮ್ಮೆಲ್ಲಾ ಕಷ್ಟಕ್ಕೆ ಹೆಗಲಾಗಿ, ನೋವಿಗೆ ನೋವಾಗಿ, ನಲಿವಿಗೆ ನಲಿವಾಗಿ ಜೊತೆಗಿರುವ ನಿಸ್ವಾರ್ಥ ಸಂಬಂಧ ಸ್ನೇಹ ಸಂಬಂಧ. ಈ ಸಂಬಂಧಕ್ಕೆ ಗೌರವ ನೀಡುವುದು, ಸ್ನೇಹಿತರನ್ನು ನೆನೆಯುವುದು, ಉಡುಗೊರೆ ನೀಡುವ ಮೂಲಕಈದಿನವನ್ನುವಿಶೇಷವಾಗಿಆಚರಿಸಲಾಗುತ್ತದೆ.

ಗೆಳೆತನ ಎನ್ನುವುದು ನಿಜವಾದ ದೇವರ ಕೊಡುಗೆ ಕುಟುಂಬದಂತೆ ಸ್ನೇಹಿತರು ಅಷ್ಟೇ ಮುಖ್ಯವಾಗಿರುತ್ತದೆ ನಮ್ಮೆಲ್ಲರ ಜೀವನದಲ್ಲಿ ಆ ಒಂದು ಬಂಧ ರಕ್ತ ಸಂಬಂಧಕಿಂತ ಮಿಗಿಲಾಗಿರುತ್ತದೆ.

ಇನ್ನೊಂದು ಖುಷಿ ಸಂಗತಿ ಎಂದರೆ ಫ್ರೆಂಡ್‌ಶಿಪ್ ಡೇಗೆ ಒಂದು ದಿನ ಮೊದಲು, ನಾವು ನಮ್ಮ ಸ್ನೇಹಿತರಿಗಾಗಿ ಬ್ಯಾಂಡ್‌ಗಳು, ಚಿಕ್ಕ ಉಡುಗೊರೆಗಳು ಖರೀದಿಸುತ್ತಿದ್ದೆವು ಇಂದು ಸ್ನೇಹಿತರ ನಡುವಿನ ಸರಳ ಸಂಬಂಧದ ಸಂಕೇತವಾಗಿತ್ತು. ಒಟ್ಟಾರೆ ನೋವು ನಲಿವಲ್ಲಿ ಕೈ ಬಿಡದ ಬೆಸುಗೆ ಈ ಗೆಳೆತನ ಎಲ್ಲರ ಜೀವನಕ್ಕೆ ಬೇಕು ಅಮೂಲ್ಯವಾದ ಫ್ರೆಂಡ್ ಶಿಪ್ ಡೇ...



– ಯು.ಎಚ್.ಎಮ್ ಗಾಯಿತ್ರಿ ಬಳ್ಳಾರಿ

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಆಷಾಡ । ಸಂವತ್ಸರ: ಕ್ರೋಧಿ

**04–08–2024 – ಭಾನುವಾರ**

| | |
|---|---|
| ತಿಥಿ | : ಅಮವಾಸ್ಯೆ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಪುಷ್ಯ |
| ಯೋಗ | : ಸಿದ್ಧಿ |
| ಕರಣ | : ನಾಗವ |
| ಸೂರ್ಯೋದಯ | : 06:00:05 |
| ಸೂರ್ಯಾಸ್ತ | : 19:05:38 |
| ರಾಹು | : 17:27–19:06 |
| ಯಮಘಂಡ | : 12:33–14:11 |
| ಗುಳಿಕ | : 15:49–17:27 |

## ತುಂಗಭದ್ರಾ ನೀರಿನ ಮಟ್ಟ



ಶನಿವಾರ : 03–08–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1631.14 ಅಡಿ |
| ಒಳ ಹರಿವು | 171353 ಕ್ಯುಸೆಕ್ |
| ಹೊರ ಹರಿವು | 174675 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 98.414 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1626.99 ಅಡಿ |
| ಒಳ ಹರಿವು | 21492 ಕ್ಯುಸೆಕ್ |
| ಹೊರ ಹರಿವು | 2253 ಕ್ಯುಸೆಕ್ |
| ಸಾಮರ್ಥ್ಯ | 83.180 ಟಿಎಂಸಿ |

# ಮಗುವಿಗೆ 6 ತಿಂಗಳವರೆಗೆ ತಾಯಿ ಎದೆ ಹಾಲನ್ನೆ ಕುಡಿಸಿ

### ತಾಲ್ಲೂಕಾ ಆರೋಗ್ಯಾಧಿಕಾರಿ ಡಾ.ರಾಮಾಂಜನೇಯ ಹೇಳಿಕೆ । ವಿಶ್ವ ಸ್ತನ್ಯಪಾನ ಸಪ್ತಾಹ



**■ ಹಂಪಿ ಟೈಮ್ಸ್ ಕೊಪ್ಪಳ**

ಶಿಶುವಿನ ದೈಹಿಕ ಮತ್ತು ಮಾನಸಿಕವಾಗಿ ಸರ್ವತೋಮುಖ ಬೆಳವಣಿಗೆಗೆ ಮಗುವಿಗೆ 6 ತಿಂಗಳವರೆಗೆ ಕೇವಲ ತಾಯಿ ಎದೆಹಾಲು ಮಾತ್ರ ಕುಡಿಸಬೇಕು ಎಂದು ತಾಲ್ಲೂಕಾ ಆರೋಗ್ಯಾಧಿಕಾರಿ ಗಳಾದ ಡಾ. ರಾಮಾಂಜನೇಯ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲ್ಲೂಕಾ ಆರೋಗ್ಯಾಧಿಕಾರಿಗಳ ಕಾರ್ಯಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ನಮ್ಮ ಕ್ಲಿನಿಕ್, ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ನಗರದ 03ನೇ ವಾರ್ಡಿನಲ್ಲಿರುವ ನಮ್ಮ ಕ್ಲಿನಿಕ್ ಸಭಾಂಗಣದಲ್ಲಿ ಆಗಸ್ಟ್ 03ರಂದು ಹಮ್ಮಿಕೊಳ್ಳಲಾದ "ವಿಶ್ವ ಸ್ತನ್ಯಪಾನ ಸಪ್ತಾಹ" ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶಿಶು ಸಂಪೂರ್ಣವಾಗಿ ವಿಕಾಸ ಹೊಂದಿ, ನ್ಯೂಮೋನಿಯಾ, ಅತಿಸಾರಭೇದಿ, ಅಪೌಷ್ಟಿಕತೆ ಇತ್ಯಾದಿ ತೊಂದೆಗಳಿಂದ ಮಗುವನ್ನು ರಕ್ಷಿಸಲು ಹುಟ್ಟಿದ ಅರ್ಧ ಗಂಟೆಯೊಳಗೆ ತಾಯಿ ಎದೆಹಾಲನ್ನು ಕುಡಿಸಬೇಕು. ಹೆರಿಗೆಯಾದ ಮೊದಲ 03 ದಿನದಲ್ಲಿ ಬರುವ ಹಾಲಿನಲ್ಲಿ ಕೋಲಾಸ್ಟ್ರಂ ಎಂಬ ರೋಗನಿರೋಧಕ ಶಕ್ತಿ ಹೆಚ್ಚಿರುತ್ತದೆ. ಮಗುವಿಗೆ ಎದೆಹಾಲು ಕುಡಿಸುವುದರಿಂದ ತಾಯಿಗೆ ಸ್ತನಕ್ಯಾನ್ಸರ್ ಬರುವುದಿಲ್ಲ. ಇದು ಮಗುವಿಗೆ ಸರಳವಾಗಿ ಜೀರ್ಣವಾಗುವುದಲ್ಲದೇ ಇದರಿಂದ ತಾಯಿ ಮಗುವಿನ ಬಾಂದವ್ಯ ಹೆಚ್ಚಾಗುತ್ತದೆ. ಮಗುವಿನ ಬುದ್ದಿಮಟ್ಟ ಹೆಚ್ಚಾಗುತ್ತದೆ ಮತ್ತು ತಾಯಿ ಮಗುವಿನ ಪ್ರೀತಿ ವಾತ್ಸಲ್ಯ ಹೆಚ್ಚಾಗುತ್ತದೆ. ಪ್ರತಿದಿನ 08 ರಿಂದ 10 ಬಾರಿ ತಾಯಿಯ ಎದೆಹಾಲು ನೀಡಬೇಕು. ಎದೆಹಾಲು ತಾಯಂದಿರಲ್ಲಿ ಹೆಚ್ಚಾಗಿ ಬೇಕಾದರೆ ಪೌಷ್ಟಿಕ ಆಹಾರವನ್ನು ಸೇವಿಸ ಬೇಕು ಹಾಗೂ ಇದರ ಬಗ್ಗೆ ಪ್ರತಿಯೊಬ್ಬರೂ ತಿಳಿದು ಕೊಂಡು ಇತರರಿಗೂ ಮಾಹಿತಿ ನೀಡಬೇಕು.

ಜಿಲ್ಲೆಯಲ್ಲಿ ಆ.01 ರಿಂದ ಆ.07 ರವರೆಗೆ "ಕೊರತೆಗಳನ್ನು ಕೊನೆಗೊಳಿಸಿ: ಸರ್ವರಿಗೂ ಸ್ತನ್ಯಪಾನದ ಬೆಂಬಲ ನೀಡಿ" ಎಂಬ ಘೋಷವಾಕ್ಯದೊಂದಿಗೆ ಈ ವರ್ಷ "ವಿಶ್ವ ಸ್ತನ್ಯಪಾನ ಸಪ್ತಾಹ" ಕಾರ್ಯಕ್ರಮ ಆಚರಿಸಲಾಗುತ್ತದೆ. ಇದರ ಉದ್ದೇಶ ಪ್ರತಿ ಗರ್ಭಿಣಿ ಭಾಣಂತಿಯರಿಗೆ, ಶಿಶುವಿಗೆ ಎದೆಹಾಲು ಕುಡಿಸುವ ಕುರಿತು ಅರಿವು ಮೂಡಿಸುವುದಾಗಿದೆ. ಭಾರತ ಹಳ್ಳಿಗಳ ದೇಶ, ಹಳ್ಳಿಗಳು ಅಭಿವೃದ್ಧಿಯಾದರೇ ದೇಶ ಅಭಿವೃದ್ಧಿಯಾದಂತೆ, ಹಳ್ಳಿಯಲ್ಲಿ ವಾಸಮಾಡುವ ಪ್ರತ್ರಿಯೊಬ್ಬ ತಾಯಂದಿರು ಇದರ ಬಗ್ಗೆ ತಿಳಿದುಕೊಂಡು ಇತರರಿಗೂ ತಿಳಿಸಬೇಕೆಂದು ಹೇಳಿದರು.

ಕಾರ್ಯ ಕ್ಷೇತ್ರದ ಎಲ್ಲಾ ಆಶಾ, ಅಂಗನವಾಡಿ ಕಾರ್ಯಕರ್ತೆರು ಮತ್ತು ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಮನೆ–ಮನೆಗೆ ಭೇಟಿ ನೀಡಿ, ಮಾಹಿತಿಯನ್ನು ನೀಡುತ್ತಾರೆ. ಎಲ್ಲಾ ತಾಯಂದಿರು ಈ ಮಾಹಿತಿಯನ್ನು ಚಾಚು ತಪ್ಪದೇ ಪಾಲಿಸಬೇಕೆಂದು ತಿಳಿಸಿದರು.

ನಗರಆರೋಗ್ಯಕೇಂದ್ರದವೈದ್ಯಾಧಿಕಾರಿಗಳಾದ ಡಾ.ಮಹೇಶ ಉಮಚಗಿ ಅವರ ಡೆಂಗ್ಯೂ ಖಾಯಿಲೆ ನಿಯಂತ್ರಣ, ಅಸಾಂಕ್ರಾಮಿಕ ರೋಗಗಳ ಕುರಿತು, ಆರ್.ಸಿ.ಹೆಚ್ ಕಾರ್ಯಕ್ರಮ ಹಾಗೂ ಕ್ಷಯರೋಗ ನಿರ್ಮೂಲನೆ ಕುರಿತು ಸವಿಸ್ತಾರವಾಗಿ ಮಾತನಾಡಿದರು.

ಕಿರುನಾಟಕ ಮೂಲಕ ಜಾಗೃತಿ: ಸ್ತನ್ಯಪಾನ ಸಪ್ತಾಹ ಕಾರ್ಯಕ್ರಮದ ಅಂಗವಾಗಿ ಕಾರ್ಯಕ್ರಮದಲ್ಲಿ ಗವಿಸಿದ್ದೇಶ್ವರ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು ಕಿರುನಾಟಕ ಮಾಡುವುದುರ ಮೂಲಕ ಜಾಗೃತಿ ಮೂಡಿಸಿದರು.

ಕಾರ್ಯಕ್ರಮದಲ್ಲಿ ನಮ್ಮ ಕ್ಲಿನಿಕ್‌ನ ವೈದ್ಯಾಧಿಕಾರಿಗಳಾದ ಡಾ.ನಿವೇದಿತಾ, ಶಾಲಾ ಶಿಕ್ಷಕರಾದ ಲಕ್ಷ್ಮೀಬಾಯಿ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಎಲ್.ವಿ.ಸಜ್ಜನ್ ಸೇರಿ ದಂತೆ ಆರೋಗ್ಯ ಇಲಾಖೆಯ ಸಿಬ್ಬಂದಿಗಳು, ಆಶಾ, ಅಂಗನವಾಡಿ ಕಾರ್ಯಕರ್ತೆಯರು, ಸ್ತ್ರೀ ಶಕ್ತಿ ಸಂಘದ ಸದಸ್ಯರು, ಗರ್ಭಿಣಿಯರು, ಬಾಣಂತಿಯರು ಕಾರ್ಯಕ್ರದಲ್ಲಿ ಭಾಗವಹಿಸಿದ್ದರು.

# ಗೋವಿನ ಜೋಳದಲ್ಲಿ ಸೈನಿಕ ಹುಳುವಿನ ನಿರ್ವಹಣೆಗೆ ಸಲಹೆ

### ಕೃಷಿ ಇಲಾಖೆ ಪ್ರಭಾರಿ ಜಂಟಿ ನಿರ್ದೇಶಕ ಜಯಪ್ರಕಾಶ್ ಹೇಳಿಕೆ



**■ ಹಂಪಿ ಟೈಮ್ಸ್ ರಾಯಚೂರು**

ಇಲ್ಲಿಯ ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಕಚೇರಿ ವತಿಯಿಂದ 2024–25ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಗೋವಿನ ಜೋಳದಲ್ಲಿ ಫಾಲ್ ಸೈನಿಕ ಹುಳುವಿನ ಬಾಧೆ ನಿರ್ವಹಣೆಗಾಗಿ ಅಗತ್ಯಕ್ರಮಗಳನ್ನು ಕೈಗೊಳ್ಳಲಾಗಿದ್ದು, ರೈತರು ಸದುಪಯೋಗಪಡಿಸಿಕೊಳ್ಳಬಹುದಾಗಿದೆ ಎಂದು ಕೃಷಿ ಇಲಾಖೆಯ ಪ್ರಭಾರಿ ಜಂಟಿ ನಿರ್ದೇಶಕ ಜಯಪ್ರಕಾಶ್ ಅವರು ತಿಳಿಸಿದ್ದಾರೆ.

ಬಾಧೆಯ ಲಕ್ಷಣಗಳು: ಮರಿ ಹುಳುಗಳು ಎಲೆಗಳ ಮೇಲ್ಮೈಯನ್ನು ಸ್ಕ್ಯಾಪಿಂಗ್ ಮಾಡುವುದು. ಡೊಡ್ಡದಾದ ಹುಳುಗಳು, ಕೇಂದ್ರ ಸುಳಿಯನ್ನು ತಿನ್ನುತ್ತವೆ. ಇದು ವ್ಯಾಪಕವಾದ ಎಲೆಗೊಂಚಲು ಉಂಟು ಮಾಡುತ್ತದೆ. ಮರಿ ಹುಳುಗಳು ಸುಳಿ ಮತ್ತು ತೆನೆಗಳನ್ನು ತಿನ್ನುತ್ತವೆ.

**ನಿರ್ವಹಣೆ:** ನಿರ್ವಹಣೆಗಾಗಿ ವ್ಯಾಪಕವಾಗಿ ಪೀಡೆ ಸಮೀಕ್ಷೆ ಕೈಗೊಂಡು ಕೀಟದ ಹರಡುವಿಕೆ ಮೇಲೆ ನಿಗಾವಹಿಸಬೇಕು. ಕೀಟದ ಮೊಟ್ಟೆಯ ಗುಂಪು ಮತ್ತು ಮರಿ ಹುಳುಗಳನ್ನು ಕೈಯಿಂದ ಆರಿಸಿ ನಾಶಪಡಿಸಬೇಕು. ಕೀಟದ ಬಾಧೆ ಕಡಿಮೆ ಇದ್ದಾಗ ಮರಿ ಹುಳುಗಳ ನಿರ್ವಹಣೆಗೆ ಬೇವಿನ ಮೂಲದ ಕೀಟನಾಶಕ ಅಜಾಡಿರಕ್ಟಿನ್ 1500 ಪಿಪಿಎಮ್ @ 2 ಮಿ.ಲೀ. ಅಥವಾ ಜೈವಿಕ ಶಿಲೀಂಧ್ರ ಕೀಟ ನಾಶಕ ಮೆಟಾರೈಜಿಯಮ್ ರಿಲೇ @ 2 ಗ್ರಾಂ ಅಥವಾ ಮೆಟಾರೈಜಿಯಮ್ ಅನಿಸೊಪ್ಲಿಎ @ 2 ಗ್ರಾಂ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು. ಕೀಟದ ತೀವ್ರತೆ ಜಾಸ್ತಿ ಆದಾಗ ಹುಳುವನ್ನು ಹತೋಟಿಯಲ್ಲಿಡಲು ಲ್ಯಾಮ್ಡಸಹಲೋಥ್ರಿನ್ @ 1 ಎಂ.ಎಲ್ ಅಥವಾ ಇಮಾಮೆಕ್ಟಿನ್ ಬೆಂಜೋಯಿಟ್ 5% ಎಸ್.ಜಿ. @0.4 ಗ್ರಾಂ ಅಥವಾ ಕ್ಲೊರಾಂತ್ರಿನಿಲಿಪ್ರೊಲ್ 18.5 ಎಸ್.ಸಿ. @ 0.3 ಮಿ.ಲೀ. ಅಥವಾ ಸೈನೋಸ್ಯಾಡ್ 45 ಎಸ್.ಸಿ @ 0.3 ಎಂ.ಎಲ್ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು. ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ಆಯಾ ರೈತ ಸಂಪರ್ಕ ಕೇಂದ್ರ ಅಥವಾ ಆಯಾ ಸಹಾಯಕ ಕೃಷಿ ನಿರ್ದೇಶಕ ಕಚೇರಿಯನ್ನು ಸಂಪರ್ಕಿಸಿ.

14 ಭಾಷೆಗಳಲ್ಲಿ
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ
ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com

# ಆಗಸ್ಟ್ 5ಕ್ಕೆ ಕಾನೂನು ಅರಿವು ನೆರವು ಕಾರ್ಯಕ್ರಮ

**■ ಹಂಪಿ ಟೈಮ್ಸ್ ಹೊಸಪೇಟೆ**

ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಹೊಸಪೇಟೆ, ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಾರ್ತಾ ಮತ್ತು ಸಾರ್ವನಿಕ ಸಂಪರ್ಕ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಆಗಸ್ಟ್ 5ರಂದು ಬೆಳಗ್ಗೆ 9 ಗಂಟೆಗೆ ಹೊಸಪೇಟೆಯ ಶ್ರೀ ಗುರು ಪದವಿ ಪೂರ್ವ ಕಾಲೇಜಿನಲ್ಲಿ ಬಾಲ್ಯ ವಿವಾಹ ನಿಷೇಧ ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳನ್ನು ರಕ್ಷಿಸುವ ಕಾಯ್ದೆ–2012ರ ಕಾನೂನು ಅರಿವು ಕಾರ್ಯಕ್ರಮ ನಡೆಯಲಿದೆ.

ಗೌರವಾನ್ವಿತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಅಬ್ದುಲ್ ರಹೀಮಾನ ಎ ನಂದಗಡಿ ಅವರು ಉದ್ಘಾಟಿಸುವರು. ಶ್ರೀಗುರು ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾದ ಮಂಜುನಾಥ ಆರ್ ಅವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಹೊಸಪೇಟೆಯ ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷರಾದ ಹೇಮಲತಾ ಬಿ. ಹುಲ್ಲೂರ, ಗೌರವಾನ್ವಿತ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಮೇಶ್ ಬಾಬು ಬಿ.ಎನ್., ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಪ್ರಶಾಂತ್ ನಾಗಲಾಪುರ್, ಗೌರವಾನ್ವಿತ ಅಪರ ಸಿವಿಲ್ ನ್ಯಾಯಾಧೀಶರಾದ ಅಶೋಕ ಆರ್.ಹೆಚ್., ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರಾದ ಸಂಜೀವ್ ಕುಮಾರ ಜಿ., ವಕೀಲರ ಸಂಘದ ಅಧ್ಯಕ್ಷರಾದ ಕೆ. ಪ್ರಹ್ಲಾದ್, ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಪಿ. ಶ್ರೀನಿವಾಸಮೂರ್ತಿ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ನಾಗರಾಜ್ ಹವಲ್ದಾರ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಸಿಂಧು ಅಂಗಡಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಗವಿಸಿದ್ದಪ್ಪ ಹೊಸಮನಿ ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಯೋಜನಾಧಿಕಾರಿಗಳಾದ ಸುಭದ್ರಾ ದೇವಿ, ಡಿಸಿಪಿಒನ ಕಾನೂನು ಪರಿವೀಕ್ಷಣಾಧಿಕಾರಿಗಳಾದ ಶ್ರೀಕಾಂತ್, ನಿವೃತ್ತ ಪ್ರಾಚಾರ್ಯ ಡಾ.ಕಡ್ಲೆಬಾಳು ಪನ್ನಂಗಧರ ಇವರು ಉಪಸ್ಥಿತರಿರುವರು.

# ಅತಿವೃಷ್ಠಿ, ಪ್ರವಾಹ ಪರಿಸ್ಥಿತಿ ಸಮರ್ಥವಾಗಿ ಎದುರಿಸಿ

**ಎರಡನೆ ಪುಟದಿಂದ**

ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿದ್ದು ಜವಾಬ್ದಾರಿ ನಿರ್ವಹಿಸಿ ಎಂದು ಸಚಿವರು ಅಧಿಕಾರಿಗಳಿಗೆ ತಿಳಿಸಿದರು.

ಜುಲೈಮಾಹೆಯ ಮಳೆಯ ಕೊರತೆಯಿಂದ ಒಣ ಬೇಸಾಯ ಅಥವಾ ಮಳೆಯಾಧಾರಿತ ಕೃಷಿಕರು ತೊಂದರೆಗೆ ಒಳಗಾಗಲಿದ್ದಾರೆ. ಮುಂದಿನ ವಾರವೂ ಮಳೆಯಾಗದಿದ್ದರೆ ಈಗಾಗಲೇ ಬಿತ್ತನೆ ಮಾಡಿದ ಬೆಳೆಗಳು ಹಾನಿಯಾಗುವ ಸಾಧ್ಯತೆ ಇರುತ್ತದೆ. ಈ ಬಗ್ಗೆ ಪರಿಶೀಲಿಸಿ ಮಳೆಯಾಗದಿದ್ದಲ್ಲಿ ಬೆಳೆ ಹಾನಿ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕು. ಬೆಳೆ ವಿಮೆ ಕುರಿತು ರೈತರಿಂದ ದೂರುಗಳು ಬಾರದ ಹಾಗೆ ಅರ್ಹ ರೈತರಿಗೆ ಬೆಳೆವಿಮೆ ಸೌಲಭ್ಯ ಕಲ್ಪಿಸಲು ಕ್ರಮ ವಹಿಸಬೇಕು ಎಂದರು.

ತುಂಗಭದ್ರಾ ಜಲಾಶಯದಲ್ಲಿ ಸದ್ಯ ಒಳಹರಿವು ಹೆಚ್ಚಿದ್ದರು ಕೂಡ, ಭವಿಷ್ಯದ ದಿನಗಳ ಬಗ್ಗೆ ಯೋಜನೆ ರೂಪಿಸಿಕೊಂಡು, ಅಗತ್ಯ ಪ್ರಮಾಣದಲ್ಲಿ ಡ್ಯಾಮನಲ್ಲಿ ನೀರನ್ನು ಸಂಗ್ರಹಿಸುವ ಕಾರ್ಯವಾಗಬೇಕು. ಹೆಚ್ಚುವರಿ ನೀರನ್ನು ನದಿಗೆ ಹರಿಸಿ ನದಿ ನೀರಿನ ಮೇಲೆ ಅವಲಂಬಿತರಾದ ರೈತರಿಗೆ ಸಮಸ್ಯೆಯಾಗದಂತೆ ನೀರು ಪೂರೈಕೆ ಮಾಡಿ ಎಂದು ಸಂಬಂಧಿಸಿದ ಇಲಾಖಾ ಅಧಿಕಾರಿಗಳಿಗೆ ಸಚಿವರು ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಮಾತನಾಡಿ, ಮುಂದಿನ ದಿನಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗಿ ಪ್ರವಾಹ ಪರಿಸ್ಥಿತಿ ಉಂಟಾದಲ್ಲಿ ಕೈಗೊಳ್ಳಬೇಕಾದ ಎಲ್ಲಕ್ರಮಗಳಬಗ್ಗೆಸಿದ್ದತೆಮಾಡಿಕೊಳ್ಳಲಾಗಿದೆ. ತೊಂದರೆಗೆ ಒಳಗಾಗಬಹುದಾದ ನದಿ ಪಾತ್ರದ 25 ಗ್ರಾಮ ಪಂಚಾಯತಿಗಳನ್ನು ಗುರುತಿಸಲಾಗಿದೆ. ಪ್ರವಾಹ ತಲೆದೋರಿದಲ್ಲಿ ಪರಿಹಾರ ಕ್ರಮವಾಗಿ ಜಂಟಿ ಕೃಷಿ ನಿರ್ದೇಶಕರಾದ ರುದ್ರೇಶಪ್ಪ ಟಿ.ಎಸ್. ಅವರು ಮಾತನಾಡಿ, ಜುಲೈ ಮಾಹೆಯಲ್ಲಿ ಶೇ.24 ರಷ್ಟು ಮಳೆ ಕೊರತೆಯಾಗಿದೆ. ಮುಂದಿನ ದಿನಗಳಲ್ಲಿ ಉತ್ತಮ ಮಳೆಯಾಗುವ ಸಾಧ್ಯತೆ ಇದ್ದು, ಮಳೆ ಕೊರತೆ ಹಾಗೂ ಹೆಚ್ಚಿನ ಮಳೆಯಿಂದ ಆಗುವ ಬೆಳೆಹಾನಿ ಕುರಿತು ಸಮೀಕ್ಷೆ ಮೂಲಕ ಮಾಹಿತಿ ಸಂಗ್ರಹಿಸಲಾಗುವುದು. 2024–25ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯಲ್ಲಿ ಒಟ್ಟು 9,895.33 ಕ್ವಿಂ. ಬಿತ್ತನೆ ಬೀಜ ದಾಸ್ತಾನು ಸ್ವೀಕೃತವಾಗಿದ್ದು, 8,098.63 ಕ್ವಿಂ. ಬಿತ್ತನೆ ಬೀಜ ಮಾರಾಟ ಮಾಡಲಾಗಿದೆ. 1,796.70 ಕ್ವಿಂ. ಉಳಿಕೆ ದಾಸ್ತಾನು ಸಂಗ್ರಹದಲ್ಲಿದೆ. ಬಿತ್ತನೆ ಬೀಜಕ್ಕೆ ಯಾವುದೇ ಕೊರತೆ ಇರುವುದಿಲ್ಲ. ಅದರಂತೆ 2024ನೇ ಸಾಲಿನಲ್ಲಿ ಒಟ್ಟು 1,07,278 ಟನ್ ರಸಗೊಬ್ಬರ ದಾಸ್ತಾನು ಸ್ವೀಕೃತಿಯಾಗಿದ್ದು, 52,008 ಟನ್ ರಸಗೊಬ್ಬರ ಮಾರಾಟ ಮಾಡಲಾಗಿದೆ. ಆಗಸ್ಟ್ 02 ರಂತೆ 55,271 ಟನ್ ರಸಗೊಬ್ಬರ ಉಳಿಕೆ ದಾಸ್ತಾನು ಸಂಗ್ರಹದಲ್ಲಿದೆ. ರಸ ಗೊಬ್ಬರದ ಕೊರತೆ ಇರುವುದಿಲ್ಲ ಎಂದು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ವಿರೋಧ ಪಕ್ಷದ ಮುಖ್ಯ ಸಚೇತಕರು ಹಾಗೂ ಕುಷ್ಟಗಿ ಶಾಸಕರಾದ ದೊಡ್ಡನಗೌಡ ಹನಮಗೌಡ ಪಾಟೀಲ್, ಸಂಸದರಾದ ಕೆ.ರಾಜಶೇಖರ ಹಿಟ್ನಾಳ್, ಕೊಪ್ಪಳ ಶಾಸಕ ಕೆ.ರಾಘವೇಂದ್ರ ಹಿಟ್ನಾಳ್, ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ, ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ಎಲ್ಲ ತಾಲ್ಲೂಕು ತಹಶೀಲ್ದಾರರು, ತಾಲ್ಲೂಕು ಮಟ್ಟದ ಅಧಿಕಾರಿಗಳು, ಉಪಸ್ಥಿತರಿದ್ದರು.

**ಪೋಸ್ಟರ್ ಬಿಡುಗಡೆ:** ಮೆಕ್ಕೆ ಜೋಳದಲ್ಲಿ ಕಂಡುಬರುವ ಹಾಗೂ ಕಂಡುಬರಬಹುದಾದ ಜೈವಿಕ ಹುಳಗಳ ನಿರ್ವಹಣೆ ಕುರಿತು ಕೃಷಿ ಇಲಾಖೆ ಹೊರತಮದಿರುವ ಪೋಸ್ಟರ್‌ಗಳನ್ನು ಸಚಿವರಾದ ಶಿವರಾಜ ತಂಗಡಗಿ, ವಿರೋಧ ಪಕ್ಷದ ಮುಖ್ಯ ಸಚೇತಕರು ಹಾಗೂ ಕುಷ್ಟಗಿ ಶಾಸಕರಾದ ದೊಡ್ಡನಗೌಡ ಹನಮಗೌಡ ಪಾಟೀಲ್ ಅವರು ಬಿಡುಗಡೆಗೊಳಿಸಿದರು.

ಈ ಸಂದರ್ಭ ಸಂಸದರಾದ ಕೆ. ರಾಜಶೇಖರ ಹಿಟ್ನಾಳ್, ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ್, ಜಿಲ್ಲಾಧಿಕಾರಿ ನಲಿನ್ ಅತುಲ್, ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ, ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ, ಜಂಟಿ ಕೃಷಿ ನಿರ್ದೇಶಕರಾದ ರುದ್ರೇಶಪ್ಪ ಟಿ.ಎಸ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ಎಲ್ಲ ತಾಲ್ಲೂಕುಗಳ ತಹಶೀಲ್ದಾರರು, ತಾಲ್ಲೂಕು ಮಟ್ಟದ ಅಧಿಕಾರಿಗಳು, ಇತರರು ಉಪಸ್ಥಿತರಿದ್ದರು.

# SSLC ಈ ಬಾರಿ ಫಲಿತಾಂಶ ನಮ್ಮದೆ
## ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi
ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

https://epaper.hampitimes.com
ಹಂಪಿ ಟೈಮ್ಸ್ ಮಾರ್ಗದರ್ಶಿ.
www.hampitimes.com/epaper.hampitimes.com

## ಭೂಗೋಳಶಾಸ್ತ್ರ

**ಅಧ್ಯಾಯ–10.ಭಾರತ: ಭೌಗೋಳಿಕ ಸ್ಥಾನ ಹಾಗೂ ಪ್ರಾಕೃತಿಕ ಲಕ್ಷಣಗಳು**

**1. ಭಾರತವು ಒಟ್ಟು ವಿಸ್ತೀರ್ಣವೆಷ್ಟು ?**
ಉತ್ತರ: 32,87,262 ಚದರ ಕಿ.ಮೀಗಳು

**2. ಭಾರತದ ಮಧ್ಯಭಾಗದಲ್ಲಿ ಹಾದು ಹೋಗುವ ಅಕ್ಷಾಂಶ ಯಾವುದು ?**
ಉತ್ತರ: ಕರ್ಕಾಟಕ ಸಂಕ್ರಾತಿ ವೃತ್ತ

**3. ಭಾರತದ ಮಧ್ಯಭಾಗದಲ್ಲಿ ಹಾದು ಹೋಗುವ ರೇಖಾಂಶ ಯಾವುದು ?**
ಉತ್ತರ: 82.1/2 ಪೂರ್ವ ರೇಖಾಂಶ

**4. ಭಾರತದ ಉತ್ತರದ ತುದಿ ಯಾವುದು ?**
ಉತ್ತರ: ಇಂದಿರಾಕೋಲ್

**5. ಭಾರತದ ದಕ್ಷಿಣದ ತುದಿ ಯಾವುದು?**
ಉತ್ತರ: ಇಂದಿರಾಪಾಯಿಂಟ್

**6. ಪ್ರಪಂಚದಲ್ಲಿಯೇ ಅತ್ಯುನ್ನತ ಶಿಖರ**
ಉತ್ತರ: ಮೌಂಟ್ ಎವರೆಸ್ಟ್

**7. ಭಾರತದಲ್ಲಿ ಅತಿ ಎತ್ತರವಾದ ಶಿಖರ ಯಾವುದು?**
ಉತ್ತರ: ಗಾಡ್ವಿನ್ ಅಸ್ಟಿನ್ ಅಥವಾ ಕೆ2

**8. ದಕ್ಷಿಣ ಭಾರತದಲ್ಲಿ ಅತಿ ಎತ್ತರವಾದ ಶಿಖರ ಯಾವುದು?**
ಉತ್ತರ: ಅನೈಮುಡಿ ಶಿಖರ

**9.ಪೂರ್ವ ಘಟ್ಟಗಳು ಪಶ್ಚಿಮ ಘಟ್ಟಗಳು ಮತ್ತು ಎಲ್ಲಿ ಸಂಧಿಸುತ್ತವೆ?**
ಉತ್ತರ: ನೀಲಗಿರಿ ಬೆಟ್ಟಗಳಲ್ಲಿ ಸಂಧಿಸುತ್ತವೆ

**10.ಕರ್ನಾಟಕದಲ್ಲಿ ಪೂರ್ವ ಘಟ್ಟಗಳನ್ನು ಯಾವ ಹೆಸರಿನಿಂದ ಕರೆಯುತ್ತಾರೆ ?**
ಉತ್ತರ: ಸಹ್ಯಾದ್ರಿ ಬೆಟ್ಟಗಳು

**11.ಪೂರ್ವ ಕರಾವಳಿಯಲ್ಲಿರುವ ಸರೋವರಗಳನ್ನು ಹೆಸರಿಸಿರಿ**
ಉತ್ತರ: ಓಡಿಸಾ" ಚಿಲ್ಕಾ" ಮತ್ತು ಆಂಧ್ರಪ್ರದೇಶದ "ಪುಲಿಕಾಟ್" ಸರೋವರ

**12.ಹಿಮಾಲಯದ ಪಾದಬೆಟ್ಟಗಳಿಗಿರುವ ಮತ್ತೊಂದು ಹೆಸರು ಯಾವುದು ?**
ಉತ್ತರ: ಶಿವಾಲಿಕ್ ಬೆಟ್ಟಗಳು

**13. ಭಾರತದ ನೆರೆಯ ರಾಷ್ಟ್ರಗಳನ್ನು ಹೆಸರಿಸಿ.**
ಉತ್ತರ: ವಾಯವ್ಯಕ್ಕೆ–ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನ, ಉತ್ತರಕ್ಕೆ– ಚೀನಾ, ನೇಪಾಳ ಮತ್ತು ಭೂತಾನ್ ಪೂರ್ವಕ್ಕೆ – ಮ್ಯಾನ್ಮಾರ್ ಹಾಗೂ ಬಾಂಗ್ಲಾ ದೇಶ ದಕ್ಷಿಣಕ್ಕೆ–ಶ್ರೀಲಂಕಾ ಮತ್ತು ಮಾಲ್ಡೀವ್ಸ ದ್ವೀಪಗಳು


**14.ಭಾರತದ ಪ್ರಾಕೃತಿಕ ವಿಭಾಗಗಳನ್ನು ವರ್ಗೀಕರಿಸಿ. (ಸೆಪ್ಟಂಬರ್ 2022)**
ಉತ್ತರ: 1)ಉತ್ತರದ ಪರ್ವತಗಳು 2) ಉತ್ತರದ ಮಹಾ ಮೈದಾನ 3) ಪರ್ಯಾಯ ಪ್ರಸ್ಥಭೂಮಿ 4) ಕರಾವಳಿ ಮೈದಾನಗಳು

**15. ಹಿಮಾಲಯದ ಮಹತ್ವವನ್ನು ವಿವರಿಸಿ. 3 ಅಂಕ (ಜೂನ್ 2023)**
ಉತ್ತರ: 1. ಭಾರತಕ್ಕೆ ರಕ್ಷಣೆಯನ್ನು ಒದಗಿಸುತ್ತವೆ.
2. ಶೀತಗಾಳಿಗಳನ್ನು ತಡೆಹಿಡಿಯುತ್ತವೆ. 3. ನದಿಗಳ ಉಗಮ ಪ್ರದೇಶವಾಗಿವೆ. 4. ಜಲವಿದ್ಯುಚ್ಛಕ್ತಿ ಉತ್ಪಾದನೆಗೆ ಅನುಕೂಲವಾಗಿವೆ. 5. ವಿಶಾಲವಾದ ಮೈದಾನಗಳನ್ನು ನಿರ್ಮಿಸಿವೆ.
6. ಸಸ್ಯ ಮತ್ತು ಪ್ರಾಣಿಗಳಿಗೆ ಆಶ್ರಯ ತಾಣವಾಗಿದೆ.
7. ಖನಿಜ ಸಂಪನ್ಮೂಲಗಳನ್ನು ಒಳಗೊಂಡಿವೆ
8. ಪ್ರವಾಸೋದ್ಯಮ ಮತ್ತು ಧಾರ್ಮಿಕ ಕೇಂದ್ರಗಳಿಗೆ ಪ್ರಸಿದ್ಧಿಯಾಗಿದೆ.

**16. ಪಶ್ಚಿಮ ಘಟ್ಟಗಳು – ಪೂರ್ವ ಘಟ್ಟಗಳಿಗಿರುವ ವ್ಯತ್ಯಾಸವನ್ನು ತಿಳಿಸಿ. (ಜೂನ್2020)**
ಉತ್ತರ: **ಪಶ್ಚಿಮ ಘಟ್ಟಗಳು**
1. ಎತ್ತರವಾಗಿವೆ 2. ನಿರಂತರವಾಗಿವೆ
3. ದಖನ್ ಪ್ರಸ್ಥಭೂಮಿಯ ಪಶ್ಚಿಮದಲ್ಲಿವೆ
4.ಅನೈಮುಡಿ ಎತ್ತರವಾದ ಶಿಖರ
**ಪೂರ್ವ ಘಟ್ಟಗಳು :** 1. ಎತ್ತರವಾಗಿಲ್ಲ 2. ನಿರಂತರವಾಗಿಲ್ಲ.
3. ದಖನ್ ಪ್ರಸ್ಥಭೂಮಿಯ ಪೂರ್ವದಲ್ಲದೆ.
4. ಆರ್ಮಕೊಂಡ ಮತ್ತು ಮಹೇಂದ್ರಗಿರಿ ಇಲ್ಲಿರುವ ಎತ್ತರವಾದ ಶಿಖರಗಳು.

**17. ಪಶ್ಚಿಮ ಕರಾವಳಿಯು ಪೂರ್ವ ಕರಾವಳಿಗಿಂತ ಹೇಗೆ ಭಿನ್ನವಾಗಿದೆ? (ಸೆಪ್ಟಂಬರ್2020)**
ಉತ್ತರ: **ಪಶ್ಚಿಮ ಕರಾವಳಿ**
1. ಪಶ್ಚಿಮ ಘಟ್ಟಗಳ ಮತ್ತು ಅರಬ್ಬಿ ಸಮುದ್ರ ನಡುವೆ ಇದೆ
2. ಕಛ್ ನಿಂದ ಕನ್ಯಾಕುಮಾರಿವರೆಗೂ ಹಬ್ಬಿದೆ
3. ಮಲಬಾರ್ ತೀರ,ಕೆನರಾತೀರ, ಕೊಂಕಣತೀರ ಎಂದು ವಿಂಗಡಿಸಲಾಗಿದೆ.
**ಪೂರ್ವ ಕರಾವಳಿ:** 1. ಪೂರ್ವ ಘಟ್ಟ ಹಾಗೂ ಬಂಗಾಳಕೊಲ್ಲಿಯ ನಡುವೆ ಇದೆ. 2. ಕನ್ಯಾಕುಮಾರಿಯಿಂದ ಗಂಗಾನದಿ ಮುಖಜ ಭೂಮಿಯವರೆಗೆ ಹಬ್ಬಿವೆ. 3. ಪೂರ್ವ ಕರಾವಳಿಯನ್ನು ಉತ್ಕಲ ತೀರ ಮತ್ತು ಕೋರಮಂಡಲತೀರ ಎಂದು ವಿಂಗಡಿಸಲಾಗಿದೆ

**18 ಭಾರತದ ನಕಾಶೆ ಬಿಡಿಸಿ ಈ ಕೆಳಗಿನವುಗಳನ್ನು ಗುರಿತಿಸಿ –5 ಅಂಕಗಳು**
1) 82.5ಪೂರ್ವ ರೇಖಾಂಶ 2) ಮಲಬಾರ್‌ತೀರ, 3) ಕರ್ನಾಟಕ ಸಂಕ್ರಾತಿವೃತ್ತ 4) ಉತ್ಕಲ ತೀರ 5) ಕೋರಮಂಡಲತೀರ 6) ಇಂದಿರಾಪಾಯಿಂಟ್ 7) ಕರ್ನಾಟಕ(ಕೆನರಾ)ತೀರ 8) ಕೊಂಕಣತೀರ




ಸೂಚನೆ : ನಕಾಶೆಗೆ 1 ಅಂಕ ಮತ್ತು ಗುರುತಿಸಲು 4 ಅಂಕಗಳು ಇರುತ್ತವೆ, ನಕಾಶೆಯನ್ನು ಅಂದವಾಗಿ ಬಿಡಿಸಲು ಪ್ರಯತ್ನಿಸಿರಿ

ನಿನ್ನ ಏಳ್ಗೆಗೆ ನೀನೇ ಶಿಲ್ಪಿ

**ಮಾರ್ಗದರ್ಶಿ ಶಿಕ್ಷಕರು : ಕೊಟ್ರೇಶ್ ಮಾಳಿಗಿ** ಸಮಾಜ ವಿಜ್ಞಾನ ಶಿಕ್ಷಕರು, ಹಗರಿಬೊಮ್ಮನಹಳ್ಳಿ, ವಿಜಯನಗರ ಜಿಲ್ಲೆ.

ಕ.ರಾ.ಮಕ್ಕಳ ಸಾಹಿತ್ಯ ಪರಿಷತ್, ವಿಜಯನಗರ ಜಿಲ್ಲೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055